UNIVERSAL LIBRARY
OU_198991
UNIVERSAL LIBRARY

BROWEN BOOK ONLY

**TEXT CUT WITHIN THE BOOK ONLY**

**TEXT FLY WITHIN THE BOOK ONLY**

**TEXT PROBLEM WITHIN THE BOOK ONLY**

# ಮಾತೃಪ್ರೇಮ

198992

ಲೇಖಕ:— ಜೀವಾಜಿ ವಿಷ್ಣು ಗೋರೆ

ರಾಸೆಲಾಸ, ಸಂಸಾರಕರ್ತವ್ಯ, ಹೆಣ್ಣುಮಕ್ಕಳ ಆರೋಗ್ಯವಿಜ್ಞಾನ,
ವಿಶ್ವಹಾಸ್ಯ, ಮುಂತಾದವುಗಳನ್ನು ಬರೆದವರು.

198992

ಧಾರವಾಡ

೧೯೩೭

ಬೆಲೆ ೦—೪—೦

ಇದನ್ನು ಶ್ರೀ. ಕೆ. ಜಿ ರಾಯದುರ್ಗ ಇವರು ತಮ್ಮ ಮೋಹನ
ಮುದ್ರಣಾಲಯ ಧಾರವಾಡದಲ್ಲಿ ಮುದ್ರಿಸಿದರು.

ಮತ್ತು

ಶ್ರೀ. ಜೀವಾಜಿ ವಿಷ್ಣು ಗೋಕೆ ಇವರು ಧಾರವಾಡ ಮಾಳಗುಡ್ಡದಲ್ಲಿರುವ
ತಮ್ಮ ಬಂಗ್ಲೆಯಲ್ಲಿ ಪ್ರಸಿದ್ಧಿಸಿದರು.

CHECKED 1956

Checked 1989

# ಮುನ್ನುಡಿ.

ಸನ್ನ ೧೯೩೫ನೆಯ ಇಸವಿಯ ಏಪ್ರಿಲ ತಿಂಗಳಲ್ಲಾದ ಪ್ರವೇಶ ಪರೀಕ್ಷೆಗೆ (ಮ್ಯಾಟ್ರಿಕ್ಯುಲೇಶನ ಪರೀಕ್ಷೆಗೆ) ಪಠ್ಯಪುಸ್ತಕವೆಂದು ಗೊತ್ತು ಪಡಿಸಿದ " Tales of lnog Ago" (by Arthur conandoyle) ಎಂಬ ಪುಸ್ತಕದೊಳಗಿನ ಅನೇಕ ಕಥೆಗಳಲ್ಲಿ ಒಂದು ಕಥೆಯ ಭಾಷಾಂತರವೇ ಈ ಚಿಕ್ಕ ಪುಸ್ತಕದ ವಿಷಯವು. ಗ್ರಂಥಕರ್ತರು ಬಹು ಪರಿಶ್ರಮದಿಂದ ಸುಮಾರು ಒಂದುವರೆ ಸಾವಿರ ವರುಷಗಳ ಹಿಂದೆ ಸಂಭವಿಸಿದ ಕಥೆಗಳನ್ನು ಕೂಡಹಾಕಿ ಈಗಿನವರ ತಿಳುವಳಿಕೆಗಾಗಿ ಬರೆದಿದ್ದೇನೋ ನಿಜ.ಆದರೆ ಆ ಕಥೆಗಳಿಂದ ನಮ್ಮ ದೇಶದ ಜನರಿಗೆ ಏನೂ ಪ್ರಯೋಜನವಿದ್ದಂತೆ ನನಗಂತೂ ತೋರಲಿಲ್ಲ. ಒಂದು ವೇಳೆ ಅವು ಗ್ರಂಥಕರ್ತರ ದೇಶಕ್ಕೆ ಉಪಕಾರಿಗಳಾಗಿರಬಹುದು. ಕೆಲವಡೆಗಳಲ್ಲಿ ಸಮುದ್ರಪ್ರಯಾಣ, ಹಡಗ ಮುಂತಾದವುಗಳ ವರ್ಣನೆ ಇದೆ. ಸಮುದ್ರವನ್ನೂ ಹಡಗವನ್ನೂ ಕನಸಿನಲ್ಲಿ ಕೂಡ ನೋಡದೆ ಇದ್ದ ವಿದ್ಯಾರ್ಥಿಗಳೂ ಶಿಕ್ಷಕರೂ ನಮ್ಮಲ್ಲಿ ಬಹು ಜನರು. ಇಂತಹ ಸಂದರ್ಭದಲ್ಲಿ ಗುರುಗಳೂ, ವಿದ್ಯಾರ್ಥಿಗಳೂ ಕೂಡಿಯೇ ಕೋಶವನ್ನು ನೋಡಿ ಅರ್ಥ ಮಾಡುತ್ತ ಹೋದರೆ ಏನು ಉಪಯೋಗವಾದೀತು ? ಹಲವೆಡೆಯಲ್ಲಿ ನಮ್ಮ ಹುಡುಗರ ತಿಳುವಳಿಕೆಗೆ ಬಾರದ ಸಂಗತಿಗಳೂ ಉಂಟು. ಇಂತಹ ನೀರಸವಾದ, ವಿದ್ಯಾರ್ಥಿಗಳ ಮುಂದಣಕಾರ್ಯಕ್ಕೆನಿರುಪಯುಕ್ತವಾದ ಪುಸ್ತಕಗಳನ್ನು ಏಕೆ ಗೊತ್ತು ಪಡಿಸುತ್ತಾರೆಂಬದು ದೇವರಿಗೆ ಗೊತ್ತು. ಅಥವಾ ವಿಶ್ವವಿದ್ಯಾಲಯದವರಿಗಾದರೂ ಗೊತ್ತಿರಲಿಕ್ಕೆ ಸಾಕು.ವಿದ್ಯಾರ್ಥಿಗಳ ಪಾಲಕರಂತೂ ಕುರುಡರು. ಶಾಲೆಯ ಚಾಲಕರು ಹೊಟ್ಟೆಗಾಗಿ ಕೆಲಸ ಮಾಡುವವರು. ವಿದ್ಯಾಧಿಕಾರಿಗಳು ಇದು ತಮ್ಮ ಕೆಲಸವಲ್ಲೆಂದು ತಿಳಿದುಕೊಂಡಿರುವರು.ಬೇರೆ ಕಡೆಗೆ ಬೊಟ್ಟು ತೋರಿಸುವರು.ಅಂದಮೇಲೆ ಈ ತೊಂದರೆಯನ್ನು ಹೋಗಲಾಡಿಸಲು ಏನು ಏರ್ಪಾಡು ಮಾಡಬೇಕು ? ಮತ್ತು ಅದನ್ನು ಯಾರು ಮಾಡಬೇಕು ? ಇರಲಿ.

ಕನ್ನಡ ವಿದ್ಯಾವರ್ಧಕ ಸಂಘದಿಂದ ಬಹುಮಾನ ಪಡೆದ ಆದರೆ ಇನ್ನೂ ಹಸ್ತಲಿಖಿತದಲ್ಲಿಯೇ ಇದ್ದ ನಾಲ್ಕು ಪುಸ್ತಕಗಳು ನನ್ನಲ್ಲುಳಿದು

ಬಹು ದಿವಸಗಳಾಗಿವೆ. ಆರ್ಥಿಕ ತೊಂದರೆಯ ಮೂಲಕ ಸಂಘವು ಅವನ್ನು ಮುದ್ರಿಸಲಿಲ್ಲ! ಅವುಗಳ ಮುದ್ರಣಕ್ಕಾಗಿ ಕಷ್ಟನಿಷ್ಟಗಳನ್ನು ಸಹಿಸಿಕೊಂಡು ಕೂಡಿಹಾಕಿದ ಹಣವೆಲ್ಲ (೩೨೦ ರೂ.) ಧಾರವಾಡ ಬ್ಯಾಂಕಿನಲ್ಲಿ ಸಿಕ್ಕಿಕೊಂಡು ಬಿಟ್ಟಿದೆ. ಅದು ಕನ್ನಡಿಯೊಳಗಿನ ಕನಕವೇ ಸರಿ. ಒಂದೊಂದು ಪುಸ್ತಕವನ್ನು ಮುದ್ರಿಸಬೇಕಾದರೆ ( ಕವ್ಹರ ಪುಟ ನೋಡಿರಿ. ) ಬಹಳ ಹಣ ಬೇಕಾಗಿದೆ. ಈಗಿನ ಕಷ್ಟಕಾಲದಲ್ಲಿ ಅಷ್ಟು ಹಣ ಸಿಕ್ಕುವದು ಸಾಧ್ಯವಿಲ್ಲ. ಒಂದೆರಡು ಚಿಕ್ಕಪುಟ್ಟ ಪುಸ್ತಕಗಳನ್ನು ಅಚ್ಚು ಹಾಕಿಸಿ: ಭಾಷಾಭಿಮಾನಿಗಳು ಹೃತ್ಪೂರ್ವಕವಾಗಿ ಮಾಡಿದ ಉದಾರಾಶ್ರಯದಿಂದ ಅವುಗಳನ್ನು ಅಚ್ಚು ಹಾಕಿಸಲು ಶಕ್ಯವಿರುವದೊ ಇಲ್ಲವೊ ಪ್ರಯತ್ನಿಸಿ ನೋಡಬೇಕೆಂದು ಆಲೋಚಿಸಿ "ರಾಮರಕ್ಷಾ ಸ್ತೋತ್ರ ( ಸರಸವಾದ ಕನ್ನಡ ಅರ್ಥವುಳ್ಳದ್ದು ) ಎಂಬ ಚಿಕ್ಕ ಪುಸ್ತಕ ವನ್ನು ಈ ಮೊದಲೇ ಮುದ್ರಿಸಿದೆ. ಇದು ಎರಡನೆಯದು. ಇವುಗಳ ಮಾರಾಟವು ತೀವ್ರವಾಗಿಯೂ, ಸರಿಯಾಗಿಯೂ ಆದರೆ ಒಂದು ಹಸ್ತ ಲಿಖಿತ ಪುಸ್ತಕವನ್ನು ಅಚ್ಚುಹಾಕಿಸಲು ಬೇಕಾದ ಅರ್ಧಮರ್ಧ ಹಣ ವಾದರೂ ಬಂದೀತೆಂದು ನಂಬುತ್ತೇನೆ.

ಮಾರ್ಗಶೀರ್ಷ ಪುಷ್ಯ ಎರಡು ತಿಂಗಳು ನಾನು ಜಡ್ಡಿನಿಂದ ಹಾಸಿಗೆ ಹಿಡಿದು ಮಲಗಿಕೊಂಡದ್ದರಿಂದ ಹಸ್ತಲಿಖಿತ ಪ್ರತಿಯನ್ನೂ ಮುದ್ರಣದ ಪ್ರತಿಯನ್ನೂ(Proof) ಪರೀಕ್ಷಿಸಿ ನೋಡುವ ಕಠಿಣ ಕೆಲಸ ವನ್ನು ನನ್ನ ಬಾಲ ಸ್ನೇಹಿತರಾದ ಶ್ರೀಯುತ ಗದಗಕರ ಕೃಷ್ಣರಾಯರೂ ನನ್ನ ಪರಮಮಿತ್ರರಾದ ಶ್ರೀಯುತ ಅಭಿಮಾನಭಾವಿ ತಮ್ಮಣರಾಯರೂ ಕೈಕೊಂಡದ್ದರಿಂದ ಅವರಿಗೆ ನಾನು ಉಪಕೃತನಾಗಿದ್ದೇನೆ.

ಮುನ್ನುಡಿಯನ್ನು ಮುಗಿಸುವ ಮೊದಲು ಮೋಹನ ಮುದ್ರಣಾಲ ಯದ ಮಾಲಕರೂ, ಮುದ್ರಕರೂ ಮಾತೃಪ್ರೇಮವನ್ನು ಮುದ್ದಾಗಿ ಮುದ್ರಿಸಿಕೊಟ್ಟ ಬಗ್ಗೆ ಮನಃಪೂರ್ವಕವಾಗಿ ಅವರ ಉಪಕಾರವನ್ನು ಸ್ಮರಿಸುತ್ತೇನೆ.

| | |
|---|---|
| ಮಾಳಮಡ್ಡಿ ಧಾರವಾಡ | ಭಾಷಾಪ್ರೇಮಿಗಳ ವಿಧೇಯ |
| ಮಾಘ ಶು. ೭. ಗುರುವಾರ ೧೮೫೭ | **ಜೀವಾಜಿ ವಿಷ್ಣು ಗೋಠೆ** |

# " ಮಾತೃ ಪ್ರೇಮ "

ಸನ್ ೫೨೮ ನೆಯ ಇಸವಿಯ ವಸಂತಕಾಲವು. ಒಂದು ದಿನ ಬೆಳಿಗ್ಗೆ ಪ್ರವಾಸಿಕರದೊಂದು ಸಣ್ಣ ಹಡಗವು ಏಶಿಯಾ ಖಂಡದೊಳಗಿರುವ ಒಂದು ಹಳ್ಳಿಯಿಂದ ಯುರೋಪಖಂಡದಲ್ಲಿರುವ ಕಾನಸ್ಟಂಟಿನೊಪಲ್ ಎಂಬ ಪಟ್ಟಣಕ್ಕೆ ಹೋಗಲು ಹೊರಟಿದ್ದಿತು. ಸೆಂಟಜಾರ್ಜ ಎಂಬ ಪುಣ್ಯಪುರುಷನ ಪುಣ್ಯತಿಥಿಯು ದಿವಸವಾದ್ದರಿಂದ ಬಹುಜನರು ಆ ಉತ್ಸವವನ್ನು ನೋಡುವದಕ್ಕಾಗಿ ಬಂದಿದ್ದರು. ಹಡಗವು ಹಿಡಿಸದಷ್ಟು ಪ್ರವಾಸಿಕರಿಂದ ತುಂಬಿದ್ದಿತು. ಏಕೆಂದರೆ ಈ ಉತ್ಸವದಿನವು ಒಳ್ಳೆ ಹೆಸರಾದದ್ದೂ, ಪುಣ್ಯಕರವಾದದ್ದೂ ಇದ್ದುದರಿಂದ ಅದನ್ನು ನೋಡಲು ಎಲ್ಲರೂ ಉತ್ಸುಕರಾಗಿದ್ದರು. ಆ ದಿವಸವು ಒಳ್ಳೆ ಶಾಂತವಾದದ್ದೂ ಸಂತೋಷವನ್ನು ಹೆಚ್ಚಿಸುವಂತೆಯೂ ಇದ್ದಿತು. ಸುಳಿಗಾಳಿಯು ಸುಳಿಯುತ್ತಿದ್ದಿತು. ಒಳ್ಳೆ ಸಂಭ್ರಮದಿಂದ ಹೊರಟ ಪ್ರವಾಸಿಕರಿಗೆ ಹಡಗಿನಲ್ಲಿ ಯಾವ ಬಗೆಯ ತೊಂದರೆಯೂ ಇರಲಿಲ್ಲ. ಬೇಸರಿಕೆ, ಓಕರಿಕೆಗಳ ಹೆಸರೂ ಇರಲಿಲ್ಲ. ಆದುದರಿಂದ ಜಗತ್ತಿನಲ್ಲಿ ಹೆಸರಾದ ಆ ಪಟ್ಟಣವು ( ಕಾನಸ್ಟಂಟಿನೋಪಲ್ ) ಸಮೀಪಿಸಲು ಅಲ್ಲಿ ಕಣ್ಣಿಗೆ ಕಾಣುವ ಅನೇಕ ಸುಂದರವಾದ ನೋಟಗಳನ್ನೂ, ಸ್ಥಳಗಳನ್ನೂ, ಬೇರೆ ಬಗೆಯ ಸೃಷ್ಟಿಸೌಂದರ್ಯವನ್ನೂ ನೋಡುವದಕ್ಕೆ ಪ್ರವಾಸಿಕರಿಗೆ ಅನುವಾಯಿತು.

ಹಡಗವು ದಂಡೆಯನ್ನು ಬಿಟ್ಟು ಒತ್ತರದಿಂದ ಮುಂದಕ್ಕೆ ಸಾಗಲು ಬಲಭಾಗದಲ್ಲಿ ಬೆಳ್ಳಗೆ ಹೊಳೆಯುವ ಹಳ್ಳಗಳೂ, ಬೇರೆ ಅನೇಕ ಉಪಗ್ರಾಮಗಳೂ ಹಚ್ಚಗಾದ ಅಡವಿಯೊಳಗಿಂದ ಹಣಕಿಕ್ಕುವಂತೆ ತೋರಿದವು. ಮುಂಭಾಗದಲ್ಲಿ ಮಾರ್ಮೊರಾ ಸಮುದ್ರದ ನೀಲಮಣಿಯಂತಿರುವ ನೀರಿನಲ್ಲಿ ಹುಲ್ಲಿನಿಂದ ಹಚ್ಚಗಾದ ಪ್ರಿನ್ಸೆಸ್ ನಡುಗಡ್ಡೆಗಳು

ಪಚ್ಚೆರತ್ನವನ್ನು ಉಟ್ಟುಕೊಂಡಿರುವವೊ ಏನೋ ಎಂಬಂತೆ ಶೋಭಿಸಿದವು. ಈ ನಡುಗಡ್ಡೆಗಳು ಕೆಲಹೊತ್ತು ಕಾನಸ್ಟಾಂಟಿನೋಪಲಿಗೆ ಅಡ್ಡಾದವು. ಆದರೆ ಹಡಗವು ಇವುಗಳನ್ನು ಸುತ್ತಿಬರಲು ಆ ಪಟ್ಟಣವು ಪಕ್ಕನೆ ಎಲ್ಲರ ಕಣ್ಣಿಗೆ ಬಿದ್ದಿತು. ಕೂಡಲೆ ಹಡಗದೊಳಗಿನವರೆಲ್ಲರೂ ಆನಂದಾಶ್ಚರ್ಯಭರಿತರಾದರು. ಪಟ್ಟಣದೊಳಗಣ ಇಟ್ಟಣಿಸಿದ ಕಟ್ಟಡಗಳು ಅಂತಸ್ತಿನ ಮೇಲೆ ಅಂತಸ್ತಿನಂತೆ ಬೆಳೆಯುತ್ತ ಬೆಳ್ಳಿಯಂತೆ ಬೆಳ್ಳಗೆ ಬೆಳಗಿದವು. ಹಿತ್ತಾಳಿಯಂತೆ ಹೊಳೆಯುವ ನೂರಾರು ಚಪ್ಪರಗಳೂ, ಚಿನ್ನದಿಂದ ಮುಲಾಮು ಮಾಡಿದ ಶಿಲಾಮೂರ್ತಿಗಳೂ ಬಿಸಿಲಿನಲ್ಲಿ ಹೊಳೆಹೊಳೆದು ತೋರಿದವು. ಮೋಡವಿಲ್ಲದ ಮುಗಿಲಿದ್ದಾಗ ಆ ಪಟ್ಟಣವನ್ನು ನೋಡಿದರೆ ಮನಸ್ಸು ಭ್ರಾಂತಿಮಯವಾಗುತ್ತಿದ್ದಿತು. ಅದು ಇಡೀ ಜಗತ್ತಿನಲ್ಲಿ ಅಷ್ಟು ಅಂದವಾದದ್ದೂ, ನಯವಾದದ್ದೂ, ರಮಣೀಯವಾದದ್ದೂ, ಪ್ರಿಯಕರವಾದದ್ದೂ ಆಗಿದ್ದಿತು.

ಆ ಚಿಕ್ಕ ಹಡಗಿನ ಮುಂಭಾಗದಲ್ಲಿರುವ ಇಬ್ಬರು ಪ್ರವಾಸಿಕರು ಅಸಮಾನ ರೂಪವುಳ್ಳವರಾಗಿದ್ದರು. ಒಬ್ಬನು ಹತ್ತು ಇಲ್ಲವೆ ಹನ್ನೆರಡು ವರುಷದ ಹುಡುಗನು; ಆತನ ವರ್ಣವು ಸಾದುಗಪ್ಪು; ಯಾವತ್ತು ಅವಯವಗಳು ತಿದ್ದಿ ಮಾಡಿದಂತಹವಾಗಿದ್ದುವು; ಕಪ್ಪಾದ ಉಂಗುರಗೂದಲು; ಕಣ್ಣುಗಳು ಕಪ್ಪಾಗಿಯೂ ಉಲ್ಹಾಸಮಯವಾಗಿಯೂ ಆಗಿದ್ದುವು. ಹುಡುಗನು ಬುದ್ಧಿವಂತನೂ ಆನಂದಭರಿತನೂ ಇದ್ದಂತೆ ತೋರುತ್ತಿದ್ದನು. ಮತ್ತೊಬ್ಬನು ಮುಪ್ಪಿನ ಮುದುಕನು; ಅವನ ಮೋರೆಯು ಬಡವಾಗಿದ್ದಿತು; ಗಡ್ಡದ ಕೂದಲು ಬೆಳ್ಳಗಾಗಿದ್ದುವು; ದೂರಿನ ಆ ಸುಂದರವಾದ ಪಟ್ಟಣವನ್ನೂ, ಸಮುದ್ರದಲ್ಲಿದ್ದ ಅನೇಕಾನೇಕ ಹಡಗುಗಳನ್ನೂ ನೋಡಿ, ಆ ಹುಡುಗನ ಮನಸ್ಸಿನಲ್ಲಿ ಹುಟ್ಟಿದ ಲವಲವಿಕೆಯನ್ನೂ, ಆನಂದವನ್ನೂ, ಉತ್ಸಾಹವನ್ನೂ ಕಂಡು ಆ ಗಂಟುಮೋರೆಯ ಮುದುಕನೂ ಕೂಡ ಮುಗುಳು ನಗೆ ನಗಲಾರಂಭಿಸಿದನು.

ಆ ಹುಡುಗನು ಅಂದನು “ಅತ್ತ ನೋಡಿರಿ, ನೋಡಿರಿ. ಅಚೇ ಒದಿಯ ರೇವಿನಿಂದ (ಬಂದರ) ಈಚೆ ಬರುತ್ತಿರುವ ದೊಡ್ಡನೂ, ಕೆಂಪೂ

ಆದ ಹಡಗುಗಳನ್ನು ನೋಡಿರಿ! ಪೂಜ್ಯರೆ, ಜಗತ್ತಿನೊಳಗಿನ ಯಾವತ್ತೂ ಹಡಗುಗಳಿಗಿಂತ ಇವು ದೊಡ್ಡವಿರುವದಿಲ್ಲವೆ?''

ಮಠಾಧಿಪನಾದ ಆ ವೃದ್ಧನು ಆ ಹುಡುಗನ ಹೆಗಲುಗಳ ಮೇಲೆ ಕೈಯಿಕ್ಕಿ ಮೆಲ್ಲಗೆ ಹೇಳಿದನು. ''ಮಗೂ, ಬಾಯಿಮಾಡದಿರು; ಮೆಲ್ಲಗೆ ಮಾತಾಡು; ಏಕೆಂದರೆ ನಾವಿಬ್ಬರೂ ನಿನ್ನ ತಾಯಿಯನ್ನು ಕಾಣುವ ತನಕ ನಮ್ಮಿಬ್ಬರಗೊತ್ತು ಯಾರಿಗೂ ಆಗಕೂಡದು. ಆ ಕೆಂಪು ಹಡಗು ಗಳು ನಿಜವಾಗಿಯೂ ಬಹು ದೊಡ್ಡವು; ಏಕೆಂದರೆ ಅವು ಯುದ್ಧದ ಹಡಗುಗಳು; ಅವು ರಾಜಧಾನಿಯಿಂದ ಬರಲಾರಂಭಿಸಿವೆ. ಆಚೆಗೆ ಹಚ್ಚ ಹಸ್ರ ಹುಲ್ಲಿನ ದಿನ್ನಿಯ ಬಳಿಯಲ್ಲಿ ರಾಜಧಾನಿಯಾದ ಕಾನಸ್ಟಂಟಿನೋಪಲ್ ಕಾಣುತ್ತಿದೆ ನೋಡು. ಅಲ್ಲಿ ವರ್ತಕರ ಹಡಗುಗಳು ಲಂಗರ್ ಹಾಕಿ ನಿಂತಿವೆ. ಮಗೂ, ಆ ದೊಡ್ಡ ದೇವಾಲಯದ ಆಚೆಗೆ ಇರುವ ಕಟ್ಟಡಗಳ ಸಾಲುಗಳನ್ನು ನೋಡು. ಸಮುದ್ರಕ್ಕೆ ಇದಿರಾಗಿ ಕಂಬಗಳ ಉದ್ದಾದ ಸಾಲುಗಳು ಕಾಣುತ್ತವಲ್ಲವೆ? ಅದೇ ಅರಸನ ಅರಮನೆಯು.

ಆ ಹುಡುಗನು ಸ್ಥಿರಚಿತ್ತದಿಂದ ನೋಡುತ್ತ ಮೆಲ್ಲಗೆ ಉಸುರಿ ದನು. ''ಅಲ್ಲಿಯೇ ನಮ್ಮವ್ವ ಇರುವಳಲ್ಲವೆ?''

ವೃದ್ಧನು ''ಅಹುದು ಮಗೂ, ಚಕ್ರವರ್ತಿನಿಯಾದ ನಿನ್ನ ತಾಯಿಯೂ, ಸಾರ್ವಭೌಮನಾದ ಆಕೆಯ ಪತಿಯೂ ಅಲ್ಲಿ ಕಾಣಿಸುವ ಅರಮನೆಯಲ್ಲಿಯೇ ಇರುವರು.''

ಸನ್ಮಾನ ಸದ್ಭಕ್ತಿ ಪೂರ್ವಕ ಆ ವೃದ್ಧನನ್ನು ನೋಡುತ್ತ ಆ ಹುಡು ಗನು ಅಂದನು. ''ಪೂಜ್ಯರೆ, ನನ್ನನ್ನು ನೋಡಿದ ಕೂಡಲೆ ನಿಜವಾಗಿಯೂ ನನ್ನ ತಾಯಿಯು ಆನಂದಭರಿತಳಾಗುವಳಲ್ಲವೆ?''

''ಅಹಹ! ಈ ಹುಡುಗನ ಈ ಸುಂದರವಾದ ಕಣ್ಣುಗಳು ಇನ್ನೂ ಇಂತಹ ಅನೇಕ ಪ್ರಶ್ನೆಗಳನ್ನು ಮಾಡುವಂತೆ ತೋರುತ್ತಿವೆ; ಅವುಗಳಿ ಗೆಲ್ಲ ನಾನೇನು ಉತ್ತರ ಹೇಳಬಲ್ಲೆನು?'' ಎಂಬ ಸಂಶಯದಿಂದಲೊ ಏನೊ ಆ ವೃದ್ಧನು ಆ ಹುಡುಗನ ಕಣ್ಣಿನ ನೋಟವನ್ನು ತಪ್ಪಿಸಿಕೊಂಡು ಅಂದನು. ''ಈ ವಿಷಯದಲ್ಲಿ ಹೀಗೇ ಆದೀತೆಂದು ಹೇಳಲಾಗುವದಿಲ್ಲ.

ಪ್ರಯತ್ನ ಮಾಡುವದಷ್ಟೇ ನಮ್ಮ ಕೆಲಸವು. ಇನ್ನು ಮಗೂ, ಈ ಅರ ಮನೆಯಲ್ಲಿ ನಿನಗೆ ಅನುವು ಸಿಕ್ಕದ ಪಕ್ಷದಲ್ಲಿ ನನ್ನ ಹಾಗೂ ನನ್ನ ಸಂಗಡಿಗರಾದ ಮಠಾಧಿಪರು ನಿನಗೆ ಬೇಕಾದ ಆಶ್ರಯವನ್ನು ಬೇಕಾದಾಗ ಬೇಕಾದಷ್ಟು ಕೊಡುವರೆಂಬ ಬಗ್ಗೆ ರವಷ್ಟೂ ಸಂಶಯವಿಲ್ಲ. ''

'' ನಾವು ಬರುವವರಿರುವೆವೆಂದು ನನ್ನ ತಾಯಿಗೆ ತಾವು ಮುಂಚಿತವಾಗಿಯೇ ಏಕೆ ತಿಳಿಸಲಿಲ್ಲ? ಹಾಗೂ ಆಕೆಯ ಉತ್ತರವನ್ನು ಅಥವಾ ಆಜ್ಞೆಯನ್ನು ಮೊದಲೇ ಏಕೆ ಪಡಕೊಳ್ಳಲಿಲ್ಲ?''

'' ಮಗೂ, ದೂರಿನ ಊರಲ್ಲಿದ್ದ ನಾವು ಆಕೆಗೆ ಮುಂಚಿತವಾಗಿಯೇ ಈ ಸಂಗತಿಯನ್ನು ತಿಳುಹಿದ್ದರೆ ಒಂದು ವೇಳೆ ಆಕೆ ಬರಬೇಡಿರೆಂದು ಸುಲಭವಾಗಿಯೂ, ಸಹಜವಾಗಿಯೂ ಹೇಳಬಹುದು, ಅಲ್ಲದೆ, ನಮ್ಮ ಈ ಪತ್ರವ್ಯವಹಾರವನ್ನು ಅರಮನೆಯ ಕಾವಲಗಾರರಾಗಲಿ, ಬೇರೆ ಅಧಿಕಾರಿಗಳಾಗಲಿ, ತಡೆಹಾಕಿ ನಮಗೆ ಏನೂ ತಿಳಿಯದಂತೆ ಮಾಡಬಹುದು ಎಂಬ ಸಂಶಯದಿಂದ ಆಕೆಯ ಒಪ್ಪಿಗೆಯನ್ನು ಅಥವಾ ಆಜ್ಞೆಯನ್ನು ಪಡಕೊಳ್ಳುವ ಗೊಂದಲದಲ್ಲಿ ಬೀಳಲಿಲ್ಲ. ಆಕೆ ನಿನ್ನ ಸುಂದರವಾದ ಈ ಕಣ್ಣುಗಳನ್ನೂ, ಆಕೆಯ ಮುಖವನ್ನೇ ಸಂಪೂರ್ಣವಾಗಿ ಹೋಲುವ ನಿನ್ನ ಈ ಮುಖಕಮಲವನ್ನೂ ನೋಡಿದ ಕೂಡಲೆ ಮುಂಚೆ ನಿನ್ನ ಮೇಲೆ ಮಾಡಿದ ಮೋಹವು ಸಹಜವಾಗಿಯೇ ನೆನಪಿಗೆ ಬರಬಹುದು; ಮತ್ತು ಸ್ತ್ರೀ ಜನಕ್ಕೆ ಸಹಜವೂ, ಸ್ವಾಭಾವಿಕವೂ ಆದ ಕೋಮಲತೆಯು ಆಕೆಯ ಹೃದಯದಲ್ಲಿದ್ದ ಪಕ್ಷದಲ್ಲಿ ಆಕೆ ನಿನ್ನನ್ನು ಪ್ರೀತಿಯಿಂದ ಸ್ವೀಕರಿಸಬಹುದು. ಆಕೆ ಹೇಳಿದ್ದನ್ನೆಲ್ಲ ಅರಸನು ಕೇಳುತ್ತಾನೆಂತಲೂ ಬೇಡಿದ್ದನ್ನು ಇಲ್ಲೆಂದು ಅನ್ನುವದಿಲ್ಲೆಂತಲೂ ಜನವಾರ್ತೆಯುಂಟು. ಅವರಿಗೆ ಮಕ್ಕಳುಮರಿಗಳಿಲ್ಲ. ಮಗೂ, ಒಟ್ಟಿನಲ್ಲಿ ದೇವರ ದಯವಿದ್ದರೆ ನೀನು ಒಳ್ಳೆ ಭಾಗ್ಯವಂತ–ನಾಗುವ ಸಂಭವವುಂಟು. ಒಂದು ವೇಳೆ ನೀನು ದುರ್ದೈವಿಯಾದರೆ, ಅನಾಥನಾಗಿದ್ದಾಗ, ನಿನ್ನನ್ನು ಪರಿಪರಿಯಿಂದ ಈ ಹೊತ್ತಿನ ತನಕ ಜೋಕೆ ಜತನ ಮಾಡಿದಂತಹ ನನ್ನನ್ನೂ ನನ್ನ ವ್ಯವಸಾಯ ಬಂಧುಗಳೂ, ಸಂಗಡಿಗರೂ ಆದ ಬೇರೆ ಮಠಾಧಿಸ್ಥರನ್ನೂ ಮಾತ್ರ ಮರೆಯಬೇಡ. ''

ಆ ವೃದ್ಧ ಮಠಾಧಿಪತಿಯು ಒಳ್ಳೆ ಆನಂದದಿಂದ ಮಾತಾಡುತ್ತಿರುವಂತೆ ಭಾಸವಾಗುತ್ತಿದ್ದಿತು ಮಾತ್ರ. ಆದರೆ ಸೂಕ್ಷ್ಮದೃಷ್ಟಿಯಿಂದ ಆತನ ವಕ್ಷಃಸ್ಥಲವನ್ನು ಪರೀಕ್ಷಿಸಿದರೆ, ರಾಜಧಾನಿಯು ಸಮೀಪಕ್ಕೆ ಬಂದ ಬಂದ ಹಾಗೆ ತಾನು ಕೈಕೊಂಡ ಕೆಲಸವು ಜಯಪ್ರದವಾಗುವದೊ, ಪರಾಜಯವನ್ನು ತರುವದೊ ಎಂಬ ಸಂಶಯದಿಂದ ಆತನ ಎದೆಯು ದಡದಡ ಹಾರುತ್ತಿರುವಂತೆ ತೋರುತ್ತಿತ್ತು. ಪ್ರಶಾಂತವಾದ ಮಠದಲ್ಲಿ ಕುಳಿತು ವಿಚಾರ ಮಾಡುವಾಗ ಯಾವ ಸಂಗತಿಯು ಸಹಜವಾಗಿಯೂ ಸುಲಭವಾಗಿಯೂ ಸಾಧ್ಯವಿದ್ದಂತೆ ತೋರಿತೊ ಅದೇ ಕಾನಸ್ಟಂಟಿನೋಪಲಿನ ಬಂಗಾರದಂತೆ ಹೊಳೆಯುವ ಕಟ್ಟಡಗಳ ಸಮೀಪಕ್ಕೆ ಬಂದ ಬಂದ ಹಾಗೆ ಸಂಶಯಮಯವಾಗಿ ತೋರಲಾರಂಭಿಸಿತು.

ಅವನು ತನ್ನೊಳಗೆ ಅಂದದ್ದು " ಹತ್ತು ವರುಷಗಳ ಹಿಂದೆ ಯಾವ ಹೆಂಗಳೆಯ (ಸ್ತ್ರೀ) ಹೆಸರನ್ನು ಪೃಥ್ವಿಯ ಪೂರ್ವಭಾಗದಲ್ಲಿ ಬಾಯಿಯಿಂದ ಎತ್ತಿದರೆ ಮಹದಪರಾಧವಾಗುತ್ತಿದ್ದಿತೊ, ಯಾವಳು ಆ ಭಾಗದಲ್ಲಿ ಸೌಂದರ್ಯಶಾಲಿನಿ ಎಂದು ಹೆಸರು ಪಡೆದಿದ್ದಳೊ, ಆದರೆ ತನ್ನ ಕುಕರ್ಮದಿಂದ ಅಷ್ಟೇ ಅಪಖ್ಯಾತಿಯನ್ನು ಹೊಂದಿದ್ದಳೊ, ಅಂಥ ಒಬ್ಬ ದುರ್ದೈವಿಯಾದ, ನೀಚಳಾದ ಹೆಂಗುಸು ಮಠದ ಬಾಗಿಲಿಗೆ ಬಂದು ನಿಂದ್ಯಕರ್ಮದಿಂದ ಹಡೆದ ತನ್ನ ಗಂಡುಮಗುವನ್ನು ಜೋಕೆ ಜತನ ಮಾಡಬೇಕೆಂದು ಅಂಗಲಾಚಿ ಬೇಡಿಕೊಂಡಳು. ಅಂತಹ ಅನಾಥ ಮಗುವನ್ನು ಜೋಕೆ ಮಾಡುವದು ಮಠದ ಮೊದಲನೆಯ ಕೆಲಸವಾದುದರಿಂದ ನಾವು ಆ ಮಗುವನ್ನು ಮಠದಲ್ಲಿರಿಸಿಕೊಂಡೆವು. ಅಂದಿನಿಂದ ಆ ಮಗು ಮಠದಲ್ಲಿಯೇ ಬೆಳೆದು ದೊಡ್ಡವನಾದನು. ಆ ವ್ಯಭಿಚಾರಿಣಿಯಾದ ಸ್ತ್ರೀ-ಥಿಯೋಡರಳು-ಅಲ್ಲಿಂದ ಹೊರಟು ತುರ್ಕಸ್ತಾನದ ರಾಜಧಾನಿಯಾದ ಕಾನಸ್ಟಂಟಿನೋಪಲಕ್ಕೆ ಬಂದು ತರುಣನೂ, ಯುವರಾಜನೂ ಆದ ಜೆಸ್ಟಿನನ್ ಎಂಬ ಯುವಕನನ್ನು ಮೋಹಗೊಳಿಸಿ ಆತನ ಸಂಪೂರ್ಣ ಪ್ರೀತಿಯನ್ನು ಸಂಪಾದಿಸಿದಳು.'' ವಾಚಕರೆ, ದೈವದ ವಿಚಿತ್ರಗತಿಯು ಹೇಗಿರುತ್ತದೆ, ನೋಡಿರಿ. ಆದುದರಿಂದಲೇ ನಮ್ಮ ಪೂರ್ವಜರು " ಸ್ತ್ರಿಯಶ್ಚರಿತ್ರಂ

ಪುರುಷಸ್ಯಭಾಗ್ಯಂ ದೇವೋ ನ ಜಾನಾತಿ ಕುತೋ ಮನುಷ್ಯಃ'' ಸ್ತ್ರೀಯರ ಚರಿತ್ರವೂ ಪುರುಷನ ಭಾಗ್ಯವೂ ಹೇಗಿರುವದೆಂಬದನ್ನು ದೇವರು ಅರಿಯನು. ಅಂದ ಮೇಲೆ ಮನುಷ್ಯನ ಪಾಡೇನು. ಎಂದು ಹೇಳಿದ್ದಾರೆ. ಇರಲಿ, ಆ ಯುವರಾಜನು, ಕಕ್ಕನು ತೀರಿಕೊಂಡ ಬಳಿಕ ಆಗಿನ ಕಾಲಕ್ಕೆ ಇಡೀ ಜಗತ್ತಿನೊಳಗೆ ದೊಡ್ಡದಾದ ತುರ್ಕಸ್ತಾನದ ರಾಜಾಧಿರಾಜನಾದನು. ಥಿಯೋಡರಳನ್ನು ತನ್ನ ಪ್ರಿಯಪತ್ನಿಯನ್ನಾಗಿಯೂ ಬಾದಶಾಹಿನಿಯನ್ನಾಗಿಯೂ ಮಾಡಿಬಿಟ್ಟನು. ಇಷ್ಟಕ್ಕೆ ಆಕೆಯ ವೈಭವವು ಮುಗಿಯಲಿಲ್ಲಾ. ಆಕೆಗೆ ಬಾದಶಹನಷ್ಟೇ ಅಧಿಕಾರ ದೊರೆಯಿತು. ಅಲ್ಲದೆ ಕೆಲಮಟ್ಟಿಗೆ ಬಾದಶಹನಿಗಿಂತಲೂ ಹೆಚ್ಚಿನ ಸ್ವತಂತ್ರತೆಯೂ ಸರ್ವಾಧಿಕಾರವೂ ಕೊಡಲ್ಪಟ್ಟವು. ಅಷ್ಟೈಶ್ವರ್ಯವನ್ನು ಪಡೆದ ಆಕೆ-ಆ ಸಿಂದ್ಯಕರ್ಮಿಣಿಯು-ತನಗೆ ಪೂರ್ವವಯಸ್ಸಿನಲ್ಲಿ ಅಂಟಿಕೊಂಡ ಕಲಂಕವನ್ನೆಲ್ಲ ಅಳಿಸಿಕೊಳ್ಳಲು ಅಟ್ಟಹಾಸಮಾಡಿ ಅದನ್ನೆಲ್ಲ ಮರೆಸಿಬಿಟ್ಟಳು. ಮತ್ತು ತಾನು ತನ್ನ ಗಂಡನಿಗಿಂತ ಬಲಿಷ್ಠಳೂ, ಜಾಣಳೂ ಇರುವಂತೆ ತೋರ್ಪಡಿಸಿದಳು. ಆದರೆ ಆಕೆ ಉಗ್ರಳೂ, ಸೇಡು ತೀರಿಸಿಕೊಳ್ಳುವ ಸ್ವಭಾವದವಳೂ, ಯಾರ ಮಾತನ್ನೂ ಕೇಳದವಳೂ, ನಿಷ್ಠುರಳೂ ಆಗಿದ್ದಳು. ಆಕೆ ತನ್ನ ಮಿತ್ರರಿಗೆ ಬೇಕಾದ ಸಹಾಯವನ್ನು ಮಾಡಲು ಸದಾಸಿದ್ಧಳಿದ್ದಳು; ವೈರಿಗಳಿಗೆ ಪ್ರತ್ಯಕ್ಷ ಯಮನೋಪಾದಿಯಾಗಿದ್ದಳು. ಇಂತಹ ಸ್ತ್ರೀಯಳ ಕೈಯಲ್ಲಿ ಆಕೆಯ ಮರೆತ ಮಗನನ್ನು ಒಪ್ಪಿಸುವ ಕೆಲಸವನ್ನು ಆ ವೃದ್ಧ ಮಠಾಧಿಪನು-ಲ್ಯೂಕನು-ಕೈಕೊಂಡಿದ್ದನು. ಒಂದು ವೇಳೆ ಆಕಸ್ಮಿಕವಾದ ಕಾರಣದಿಂದ ಆಕೆಗೆ ತಾನು ತನ್ನ ಪೂರ್ವವಯಸ್ಸಿನಲ್ಲಿ ಮಾಡಿದ ಕುಕರ್ಮಗಳು ನೆನಪಿಗೆ ಬಂದವೆಂದು ಕಲ್ಪಿಸಿದರೆ,- ಅಂದರೆ ಆಫ್ರಿಕದೊಳಗಿನ ಪಂಚಗ್ರಾಮಾಧಿಪನಾದ ಎಸಿಬೋಲಸನು ತನ್ನನ್ನು ನಿರಾಕರಿಸಿ ಬಿಟ್ಟ ಸಂಗತಿಯೂ, ತಾನು ಏಸಿಯಾ ಮಾಯನರದೊಳಗಿಂದ ಕಾಲಿನಿಂದಲೇ ಪ್ರವಾಸಮಾಡಿ ತನ್ನಮಗುವನ್ನು ಮಠಾಧಿಪರಿಗೆ ಒಪ್ಪಿಸಿದ ಸಂಗತಿಯೂ ಆಕೆಗೆ ನೆನಪಾದವೆಂದು ತಿಳಿದರೆ- ಆ ಮಠಾಧಿಪರು ಪೃಥ್ವಿಯ ಯಾವದೋ ಒಂದು ದೂರಿನ ಸ್ಥಳದಲ್ಲಿ ವಾಸಮಾಡುತ್ತಿರುವದರಿಂದ ಈಗ ವೈಭವಶಾಲಿನಿಯೂ, ಚಕ್ರವರ್ತಿ

ನಿಯೂ ಆದ ಥಿಯೋಡರಳು ಮುಂಚಿನ ನಿಂದ್ಯಕರ್ಮಿಯಾದ ಥಿಯೋಡ ರಳೇ ಇರುವಳೆಂದು ಅವರು ಗುರ್ತಿಸಲಾರರೆಂದೂ ತಾನು ಮಾಡಿದ ಯಾವತ್ತು ಪಾಪಕೃತ್ಯಗಳು ಎಂದೂ ಬಯಲಿಗೆ ಬರಲಾರವೆಂದೂ, ಆ ಕೃತ್ಯಗಳು ತನ್ನ ಗಂಡನಾದ ಬಾದಶಹನಿಗೆ ಎಂದೂ ಗೊತ್ತಾಗಲಾರ ವೆಂತಲೂ ದೃಢವಾಗಿ ನಂಬಿ ತನ್ನನ್ನು ತಾನೇ ಸಮಾಧಾನ ಪಡಿಸಿ ಕೊಳ್ಳುತ್ತಿದ್ದಳು.

ಆ ಚಿಕ್ಕ ಹಡಗವು ಸಮುದ್ರವನ್ನು ಸುತ್ತಿಕೊಂಡು ಮುಂದೆ ಬರಲು ವಿಸ್ತಾರವಾದಂತಹ, ನೀಲವರ್ಣದ ಕಾನಸ್ಟಂಟಿನೋಪಲಿನ ಸುಂದರವಾದ ಬಂದರವು ಕಂಗೊಳಿಸಿತು. ಆ ಪಟ್ಟಣದ ಎತ್ತರವಾದ ಗೋಡೆಗಳು ಇಡೀ ಬಂದರವನ್ನೇ (ರೇವನ್ನು) ವ್ಯಾಪಿಸಿದ್ದುವು; ಆದರೂ ನಡುವೆ ಜನರಿಗೆ ಹೋಗಲು ಒಂದು ಇಕ್ಕಟ್ಟಾದ ದಾರಿ ಇದ್ದಿತು. ಆ ಹಡಗವು ದಂಡೆಗೆ ಒಂದು ಮುಟ್ಟಲು ಪ್ರವಾಸಿಕರು ಹಡಗದಿಂದ ಕೆಳಗಿಳಿದರು. ಅಲ್ಲಿಯೇ ನಿಂತಿರುವ ಕಾವಲುಗಾರರು ಪ್ರವಾಸಿಕರನ್ನು ಪರಿಶೋಧಿಸಿ (ಅಂದರೆ ರೋಗಪೀಡಿತರಲ್ಲೆಂಬದನ್ನು ವಿಚಾರಿಸಿ) ಮುಂದೆ ಹೋಗಗೊಟ್ಟರು.

ಆ ಮಠಾಧಿಪನು ತನ್ನ ಮಠದ ಕಾರ್ಯಗಳಗೋಸುಗ ಅನೇಕಾ ವರ್ತಿ ಕಾನಸ್ಟಂಟಿನೋಪಲಿಗೆ ಬಂದು ಹೋಗಿದ್ದನಾದುದರಿಂದ ಸ್ಥಿರ ವಾದ ಹೆಜ್ಜೆಗಳನ್ನಿಕ್ಕುತ್ತ ಸಂಕಲ್ಪಿತ ಸ್ಥಳಕ್ಕೆ ಹೋಗುವವನಂತೆ ನಡೆ ದಿದ್ದನು. ಆದರೆ ಆ ಹುಡುಗನು ಮಾತ್ರ ಅತ್ತಿಂದಿತ್ತ ಇತ್ತಿಂದತ್ತ ಓಡಾಡುವ ಜನರ ಕಲಕಲಾಟವನ್ನೂ ರಥಾದಿವಾಹನಗಳ ಕಡಕಡಾಟ ವನ್ನೂ ಸಾಲಾಗಿದ್ದ ಶೋಭಾಯಮಾನವಾದ ಕಟ್ಟಡಗಳನ್ನೂ ನೋಡಿ ತುಸು ಗಾಬರಿಯಾದಾಗ್ಯೂ ಬಳ್ಳೆ ಸಂತೋಷದಿಂದ ಆ ಮುದಿ ಮನು ಷ್ಯನ ಸಡಿಲಾದ ನಿಲುವಂಗಿಯನ್ನು ಹಿಡಿದುಕೊಂಡು ಸುತ್ತಲು ಉತ್ಕಂಠ ತೆಯಿಂದ ನೋಡುತ್ತ ನಡೆದಿದ್ದನು; ಒಂದರದಿಂದ ಎಂರ್ಗಾಯೂ ಇಕ್ಕ ಟ್ಟಾಗಿಯೂ ಇದ್ದ ದಾರಿಯಿಂದ ನಡೆಯುತ್ತ ಅವರು ಈಗ ವೈಭವಶಾಲಿ ಯಾದ ಸೆಂಟಸೋಫಿಯಾ ಎಂಬ ದೇವಾಲಯದ ಸುತ್ತಲಿರುವ ಬಯಲಿಗೆ

ಬಂದು ಮುಟ್ಟಿದರು. ಕಾನಸ್ಟಂಟಾಯನನೆಂಬವನು ಈ ದೊಡ್ಡ ದೇವಾಲಯದ ಆಸ್ತಿವಾರವನ್ನು ( ತಳಹದಿ, "ಪಾಯಾ" ) ಹಾಕಿದನು. ಮತ್ತು ಸೇಂಟ ಕ್ರಾಯಸೊಸ್ಟಾಮ ಎಂಬವನು ಅದರ ಪ್ರತಿಷ್ಠೆ ಮಾಡಿದನು ಈಗಂತೂ ಅದು ಪೂರ್ವಭಾಗದೊಳಗಿನ ಯಾವತ್ತು ದೇವಾಲಯಗಳ ಮುಕುಟಮಣಿಯಾಗಿ ಹೋಗಿದೆ. ಎಷ್ಟೋ ಅಡ್ಡದಾರಿಗಳನ್ನು ದಾಟಿ, ಅನೇಕಾವರ್ತಿ ಪ್ರಣಾಮ ಪೂರ್ವಕ ಉಪಾಸನೆಮಾಡಿ (ನಮಸ್ಕಾರಮಾಡಿ ) ಆ ಧರ್ಮಿಷ್ಠ ಮಠಾಧಿಪನು ತನ್ನ ಪವಿತ್ರವಾದ ಗುಡಿಯನ್ನು ದಾಟಿ ಮುಂದರಿದು ತನ್ನ ಕಠಿಣತರವಾದ ಕೆಲಸವನ್ನು ಮಾಡುವದಕ್ಕಾಗಿ ಅವಸರದಿಂದ ಮುಂದೆ ಸಾಗಿದನು. ಆ ಇಬ್ಬರು ಪ್ರವಾಸಿಕರು ಸೋಫಿಯಾ ದೇವಾಲಯವನ್ನು ದಾಟಿ ಮುಂದೆ ಬಂದು ಸಂಗಮರವರೀ ಕಲ್ಲಿಸಿಂದ ಕಟ್ಟಿದ ದಾರಿಗುಂಟ ಹೋಗುತ್ತಿರಲು ಅವರಿಗೆ ರಥಯಾನ ಮಾರ್ಗವು ( ರಥ ಹೋಗುವಷ್ಟು ದೊಡ್ಡದಾದದಾರಿ ) ಕಾಣಿಸಿತು. ಆ ಮಾರ್ಗದ ಬದಿಯಲ್ಲಿದ್ದ ಅಗಸೇ ಬಾಗಿಲಗಳು ಬಂಗಾರದಿಂದ ಮುಲಾಮು ಮಾಡಲ್ಪಟ್ಟಿದ್ದುವು. ಆ ದಾರಿಗುಂಟ ಜನರು ಬಹು ದಟ್ಟಣೆಯಿಂದ ಬರುತ್ತಿದ್ದರು; ಏಕೆಂದರೆ ಮುಂಜಾವಿನ ಧಾರ್ಮಿಕೋತ್ಸವವನ್ನು ಸಾಂಗಗೊಳಿಸಿ ಮಧ್ಯಾಹ್ನದಲ್ಲಿ ಬಹು ದೊಡ್ಡ ಲೌಕಿಕೋತ್ಸವವು ಜರುಗತಕ್ಕದ್ದಿತ್ತು. ಇಂತಹ ಅಪೂರ್ವವಾದ ಜನರ ಸಂದಟ್ಟಣೆಯನ್ನು ಬಹು ಕಷ್ಟದಿಂದ ದಾಟುತ್ತ,ಜನರೆಂಬ ಸಮುದ್ರವನ್ನು ಈಜುತ್ತ ಅರಮನೆಯ ಹೊರಗಿನ ಅಗಸೀಬಾಗಿಲದ ಸಮೀಪಕ್ಕೆ ಬಂದು ಮುಟ್ಟಿದರು. ಆ ಬಾಗಿಲವು ಸುಂದರವಾದ ಕರೆ ಸಂಗಮರವರೀ ಕಲ್ಲಿನಿಂದ ಮಾಡಲ್ಪಟ್ಟಿತ್ತು. ಒಳಸೇರಲಿಕ್ಕೆ ಅವರು ಹವಣಿಸಿದರು. ಆದರೆ ಬಂಗಾರದ ತುರಾಯಿಯುಳ್ಳ ಒಬ್ಬ ಭವ್ಯ ಕಾವಲುಗಾರನು ಅವರನ್ನು ತಡೆದನು. ಅವನು ತಳತಳನೆ ಹೊಳೆಯುವ ತನ್ನ ಬರ್ಚಿಯನ್ನು ಅವರ ಎದೆಯ ಸಮೀಪಕ್ಕೆ ಹಿಡಿದು ತನ್ನ ಮೇಲಧಿಕಾರಿಯ ಅಪ್ಪಣೆಯಿಲ್ಲದೆ ಮುಂದೆ ಹೋಗಗೊಡುವದಿಲ್ಲೆಂದು ಹೇಳಿದನು. ಆದರೆ ದ್ವಿಹೀ*ನನೂ, ಪ್ರಮುಖ

---

* ದ್ವಿ= ಎರಡು; ದ್ವಿಹೀನ= ಎರಡೂ ಅಲ್ಲದವನು, ಅಂದರೆ ಸ್ತ್ರೀಯೂ ಪುರುಷನೂ ಅಲ್ಲದವನು, ತೃತೀಯ ಪ್ರಕೃತಿಯವನು.

ಪಾರುಪತ್ಯಗಾರನೂ, ಹಗಲಿರುಳು ಅರಮನೆಯ ಬಳಿಯಲ್ಲಿಯೇ ಇರುವವನೂ ಆದ ಬೇಸೀಲ ಎಂಬವನ ಹೆಸರು ಹೇಳಿದರೆ ಸಾಕು. ಅಂತಃಪುರದೊಳಗೆ ಬೇಕಾದಲ್ಲಿ ಹೋಗಲು ಏನೂ ಆತಂಕ ಇಲ್ಲವೆ ಪ್ರತ್ಯವಾಯವಿರಲಿಲ್ಲ. ಈ ಸಂಗತಿಯು ಆ ವೃದ್ಧನಿಗೆ ಚನ್ನಾಗಿ ಗೊತ್ತಿದ್ದಿತು. ಬೇಸೀಲನ ಹೆಸರು ಹೇಳಿದ ಕೂಡಲೆ ಆ ಕಾಲಕ್ಕೆ ಸುದೈವದಿಂದ ಕಾವಲುಗಾರರ ಮುಖ್ಯಸ್ಥನೇ ಪಹರೆ ಮಾಡುತ್ತಿದ್ದನಾದುದರಿಂದ, ಅವನು ಅವರಿಬ್ಬರನ್ನು ಬೇಸೀಲನ ಬಳಿಗೆ ಕರೆದೊಯ್ಯಬೇಕೆಂದು ತನ್ನ ಜವಾನರಲ್ಲೊಬ್ಬನಿಗೆ ಅಜ್ಞಾಪಿಸಿದನು,

ಆ ಅರಮನೆಯ ಪಹರೆ ಮಾಡಲು ಅನೇಕಾನೇಕ ಕಾವಲುಗಾರರಿದ್ದರು. ನಮ್ಮ ಪ್ರವಾಸಿಕರು ಕ್ರಮವಾಗಿ ಮೊದಲನೆಯ, ಎರಡನೆಯ ಮೂರನೆಯ ಇದೇ ಮೇರೆಗೆ ಇನ್ನೂ ಎಷ್ಟೋ ಪಹರೆಯವರನ್ನು ದಾಟುತ್ತ ದಾಟುತ್ತ ಕಡೆಗೆ ಅರಮನೆಗೆ ಬಂದು ಮುಟ್ಟಿದರು. ಅವರನ್ನು ಕಳುಹಲು ಬಂದ ಕಾವಲುಗಾರನು ಮಾತ್ರ ಅವರ ಹಿಂದಿನಿಂದಲೇ ಬರುತ್ತಿದ್ದನು. ಅವರು ಒಂದು ಸುಂದರವಾದ ಕೋಣೆಯನ್ನು ದಾಟುತ್ತ ಮತ್ತೊಂದು ಅದಕ್ಕೂ ಅಂದವಾದ ಕೋಣೆಯನ್ನು ನೋಡುತ್ತ, ಇನ್ನೊಂದು ಚಂದವಾದ ಕೋಣೆಯನ್ನು ನಿರೀಕ್ಷಿಸುತ್ತ, ನಡೆದರು. ಪ್ರತಿಯೊಂದು ಕೋಣೆಯು ಮತ್ತೊಂದಕ್ಕಿಂತ ರಮಣೀಯವಾಗಿಯೇ ತೋರುತ್ತಿದ್ದಿತು. ನೋಡಿದಲ್ಲೆಲ್ಲ ಸುಂದರವಾದ ಸಂಗಮರವರೀ ಕಲ್ಲಿನಿಂದಲೂ, ಚಿನ್ನದಿಂದಲೂ, ಮಖಮಲಿನಿಂದಲೂ, ಬೆಳ್ಳಿಯಿಂದಲೂ ಮಾಡಿದ ಅಂದವಾದ ಒಡವೆಗಳು ಕಂಗೊಳಿಸುತ್ತಿದ್ದವು. ವಿಚಿತ್ರವಾಗಿ ಕೆತ್ತಿದ ಚಿತ್ರಗಳು ಅಲ್ಲಲ್ಲಿ ಕಾಣುತ್ತಿದ್ದವು. ಅಲ್ಲಿರುವ ಪಡದೆಗಳು ಆನೆಯ ಕೋರೆಯಿಂದ ಮಾಡಲ್ಪಟ್ಟಿದ್ದವು; ಹಲವು ಪಡದೆಗಳು ಅನೇಕ ಬಗೆಯ ರೇಶಿಮೆಯನ್ನು ಸಮ್ಮಿಶ್ರಮಾಡಿ ಹೆಣೆಯಲ್ಪಟ್ಟಂತೆ ತೋರುತ್ತಿದ್ದವು. ನಮ್ಮ ಹಳ್ಳಿಗಾಡದ ಪ್ರವಾಸಿಕರು ಈ ಪಡದೆಗಳನ್ನು ನೋಡಿ ಬೆರಗಾದರು. ಆರ್ಮಿನಿ ದೇಶದಲ್ಲಿ ಸಿಕ್ಕುವ ರೇಶ್ಮಿಯೂ, ಹಿಂದುಸ್ತಾನದಲ್ಲಿ ದೊರೆಯುವ ರೇಶ್ಮಿಯೂ, ಅರಬಸ್ತಾನದಲ್ಲಿ ಹುಟ್ಟುವ

' ದಮಾಸ್ಕ '' ಎಂಬ ರೇಶ್ಮೆಯೂ, ಬಾಲ್ಟಿಕ ದೇಶದಲ್ಲಿ ಬೆಳೆಯುವ '' ಅಂಬರ '' ಎಂಬ ರೇಶ್ಮೆಯೂ ಒಟ್ಟಾಗಿ ಇಲ್ಲಿಯೇ ಬಂದಿರುವದೊ ಏನೊ ಎಂದು ಅವರಿಗೆ ಭಾಸವಾಯಿತು. ಮನುಷ್ಯನ ಕ್ಷಣಭಂಗುರ ವಾದ ಸಂಸಾರದ ಸಲುವಾಗಿ ಕಟ್ಟಿದ ಇಷ್ಟು ವೈಭವ ಶಾಲಿಯಾದ, ಶೋಭಾಯಮಾನವಾದ, ಸೌಂದರ್ಯಮಯವಾದ ಅರಮನೆಯನ್ನು ನೋಡಿ ಅವರ ಕಣ್ಣುಗಳು ಕುಕ್ಕಿದವು; ಅವರ ಪಂಚೇಂದ್ರಿಯಗಳು ಭ್ರಮಗೊಂಡಂತಾದವು. ಕಟ್ಟಕಡೆಗೆ ಚಿನ್ನದಿಂದ ಮುಲಾಮು ಮಾಡಿದ ಪಡದೆಗಳು ತೆರೆಯಲ್ಪಟ್ಟವು. ಅಲ್ಲಿ ಆ ಪ್ರಮುಖ ಪಾರುಪತ್ಯಗಾರನು ನಿಂತಿದ್ದನು. ಕಾವಲುಗಾರನು ಅಪರಿಬ್ಬರನ್ನು ಅವನ ಮುಂದೆ ನಿಲ್ಲಿಸಿ ದನು. ಆ ಪಾರುಪತ್ಯಗಾರನು ಜಡವಾದ ಶರೀರವುಳ್ಳವನೂ ಗುಡುಗನೂ ಆಗಿದ್ದನು. ಅವನ ಮೈಬಣ್ಣ ಕಂದು; ಮೋರೆಯು ದೊಡ್ಡದೂ ಜೋಲು ಬಿದ್ದದ್ದೂ ಆಗಿದ್ದಿತು. ಮೋರೆಯ ಮೇಲೆ ಕೂದಲು ಒಂದೂ ಇರಲಿಲ್ಲ. ಅವನು ಅತ್ತಿತ್ತ ಮೆಲ್ಲಗೆ ಅಡ್ಡಾಡುತ್ತಿದ್ದನು. ನಮ್ಮ ಪ್ರವಾಸಿಕರು ಬಂದದ್ದು ಕಂಡು ಅವನು ಅವರೆದುರಿಗೆ ಬಂದು ನಿಂತು ಅವರನ್ನುನೋಡಿ ಮುಗುಳು ನಗೆ ನಕ್ಕನು. ಆದರೆ ನೋಡುವವರಿಗೆ ಆ ನಗೆಯಲ್ಲಿ ತಿರಸ್ಕಾ ರವೂ, ಭೀತಿಯೂ ತುಂಬಿ ತುಳುಕುವಂತೆ ತೋರುತ್ತಿದ್ದವು. ಅವನ ತುಟಿಗಳು ತೆರೆದಿದ್ದವು; ಗಲ್ಲಗಳು ಜೋತಾಡುತ್ತಿದ್ದವು; ಅವನು ಒಬ್ಬ ಸ್ಥೂಲವಾದ ಮುದಿಹೆಂಗಸಿನಂತೆ ಕಾಣುತ್ತಿದ್ದನು. ಅವನ ಕಣ್ಣುಗಳು ಕಪ್ಪಾದವೂ ಮತ್ಸರಯುಕ್ತವಾದಂತಹವೂ ಇದ್ದವು. ಆದರೆ ಪರೇಂಗಿತ ವನ್ನು ( ಪರರ ಮನಸ್ಸಿನೊಳಗಿನ ಭಾವವನ್ನು) ತಿಳಿದುಕೊಳ್ಳುವಂತಹ ನಿರೀಕ್ಷಣ ಸಾಮರ್ಥ್ಯವು ತುಂಬಾ ಅವುಗಳಲ್ಲಿ ಇದ್ದಿತು.

ಅವನು ಅಂದನು '' ನೀವು ನನ್ನ ಹೆಸರನ್ನು ಹೇಳಿದ್ದರಿಂದಲೇ ಇಲ್ಲಿ ಬರಲು ನಿಮಗೆ ಅಪ್ಪಣೆದೊರೆಯಿತಲ್ಲವೆ? ಬೇಕಾದವರು ಈ ಸಾಧನದಿಂದ ನನ್ನೆಡೆಗೆ ಬರಬಹುದು, ಮತ್ತು ಈ ಬಗ್ಗೆ ನನಗೆ ತುಸು ಅಭಿಮಾನವೆನಿಸುವದೂ ನಿಜ. ಆದರೆ ಯೋಗ್ಯಕಾರಣ ಅಥವಾ ಕಾರ್ಯ ವಿಲ್ಲದೆ ನಿರರ್ಥಕವಾಗಿ ನನ್ನಹೆಸರು ಹೇಳಿ ಇಲ್ಲಿಗೆ ಬಂದವರ ಪರಿಣಾಮವು

ನೆಟ್ಟಗಾಗಲಾರದೆಂಬದನ್ನು ಮಾತ್ರ ಯಾರೂ ಮರೆಯ ಕೂಡದು"
ಹೀಗೆಂದು ಅವನು ಮತ್ತೊಮ್ಮೆ ಮುಗುಳು ನಗೆ ನಕ್ಕನು. ಆದರೆ ಆತನ
ನಗೆಯನ್ನು ನೋಡಿ ಆ ಹುಡುಗನು ಗಾಬರಿಗೊಂಡು ಆ ವೃದ್ಧನ ನಿಲು
ವಂಗಿಯ ಅಂಚನ್ನು ಗಟ್ಟಿಯಾಗಿ ಹಿಡಿದುಕೊಂಡು ಅವನ ಮೈಗೆ ತನ್ನ
ಮೈಯನ್ನು ಹೊಂದಿಸಿ ನಿಂತನು.

ಆ ಮಠಾಧಿಪನು ಮಾತ್ರ ಧೈರ್ಯವಂತನಾಗಿದ್ದನು. ಆ ದೊಡ್ಡ
ಪಾರುಪತ್ಯಗಾರನ ಕುಟಿಲಮಯವಾದ ನೋಟವನ್ನೂ, ಅವನ ಮಾತು
ಗಳಲ್ಲಿದ್ದ ಬೆದರಿಕೆಯನ್ನೂ ಲೆಕ್ಕಿಸದೆ ತನ್ನ ಕೈಯನ್ನು ಆ ಹುಡುಗನ
ಹೆಗಲ ಮೇಲಿಟ್ಟು ಪಾರುಪತ್ಯಗಾರನ ಎದುರಿಗೆ ನಿಂತು. ನಂಬಿಗೆ
ಯುಕ್ತನಾಗಿ ಮುಗುಳು ನಗೆ ನಗುತ್ತ ಅಂದನು. "ಮಹಾರಾಜರೆ,
ತಮ್ಮ ಹೆಸರಿನ ಪ್ರಭಾವದಿಂದಲೇ ನಾನು ಇಲ್ಲಿಗೆ ಬಂದದ್ದು ನಿಜ, ಅಲ್ಲದೆ
ನನ್ನ ಕಾರ್ಯವು ಕೂಡ ಅಷ್ಟು ಮಹತ್ವದ್ದು ಇರುವದರಿಂದಲೇ ನಾನು
ಈ ಅರಮನೆಯಲ್ಲಿ ಬರಲು ನನಗೆ ಅಧಿಕಾರ ಬಂದಿದೆ. ಎಂದು ನನ್ನ
ಸ್ಥಿರವಾದ ನಂಬಿಗೆ. ಆದರೆ ಆ ಮಹತ್ವದ ಸಂಗತಿಯನ್ನು ತಮ್ಮ
ಕಿವಿಯ ಮೇಲೆ ಹಾಕಬಹುದೊ ಹಾಕಬಾರದೊ ಎಂಬ ಬಗ್ಗೆ ನನಗೆ
ತುಸು ಸಂದೇಹ ಉಂಟಾಗಿದೆ. ಸ್ಪಷ್ಟವಾಗಿ ಹೇಳುವದೆಂದರೆ ಬಾದ
ಶಾಹಿನಿಯಾದ ಥಿಯೋಡೋರಾನ ಹೊರ್ತಾಗಿ ಬೇರೆಯಾರಿಗೂ ಆ ಸಂಗತಿ
ತಿಳಿಯಬಾರದೆಂದು ನನ್ನ ಇಚ್ಛೆ. ಏಕೆಂದರೆ ಅದು ಅವರನ್ನೇ ಸಂಪೂರ್ಣ
ವಾಗಿ ಸಂಬಂಧಿಸಿದೆ."

ಆ ಪಾರುಪತ್ಯಗಾರನು (ನೆಜ್ಜಿವಳನು) ಆ ವೃದ್ಧನನ್ನು ತನ್ನ
ದುಷ್ಟ ದೃಷ್ಟಿಯಿಂದ ದುರುದುರನೆ ನೋಡಿದನು. ಮತ್ತು ಹುಬ್ಬು
ಗಂಟಿಕ್ಕಿ ಅಂದನು "ವೃದ್ಧನೆ, ನೀನು ಆಡಿದ ಮಾತು ಅಂದರೆ ನಿನ್ನ
ಕಾರ್ಯವು ಬೇರೆಯವರ ಕಿವಿಗೆ ಬೀಳಬಾರದೆಂಬ ಮಾತು ನಿಜವಾಗಿರುವ
ದೆಂಬದನ್ನು ಸಿದ್ಧಮಾಡಿ ತೋರಿಸು. ಇಲ್ಲವೆ ನೀನು ಅಂಥ ಮಾತುಗಳನ್ನು
ಆಡಿದ ಬಗ್ಗೆ ಪಶ್ಚಾತ್ತಾಪವನ್ನಾದರು ವ್ಯಕ್ತಪಡಿಸು. ಏಕೆಂದರೆ ನನ್ನ
ದಯಾಳೂ, ಆಶ್ರಿತವತ್ಸಲನೂ ಆದ ಯಜಮಾನನು-ಸದಾ ಸರ್ವಕಾಲ

ಮಹಾಮಹಿಮೆಯುಳ್ಳ ಚಕ್ರವರ್ತಿಯಾದ ಜೆಸ್ಟಿನಿಯನನು ಕೂಡ ಎಲ್ಲ ಬಗೆಯ ಗುಪ್ತಸಂಗತಿಯನ್ನು ನನಗೆ ತಿಳಿಸುತ್ತಿರಲು ನೀನು ಮಾತ್ರ ನಿನ್ನ ಕಾರ್ಯವು ನನ್ನ ಕಿವಿಗೆ ಬೀಳಬಾರದೆಂದು ಅನ್ನುವಿ; ಇದು ಒಳ್ಳೆ ವಿಲಕ್ಷಣವಾದದ್ದೇಸರಿ. ನಿನ್ನ ಉಡಿಗೆ ತೊಡಿಗೆಗಳನ್ನು ನೋಡಿದರೆ ನೀನು ಏಶಿಯದೊಳಗಿನ ಯಾವದೋ ಒಂದು ಮಠದ ಅಧಿಕಾರಿ ಇರುವಿ ಎಂದು ನಾನು ಊಹಿಸುತ್ತೇನೆ. "

" ಅಹುದು, ಮಹಾರಾಜರೆ, ತಾವು ಊಹಿಸಿದ್ದು ನಿಜ. ನಾನು ಅಂಟಿಯೋಕದಲ್ಲಿರುವ ನಾಯಿಸಫೋರಸ ಎಂಬ ದೇವಾಲಯದ ಅಧಿಪತಿಯು.ಆದರೆ ನಾನು ಹೇಳತಕ್ಕ ಸಂಗತಿಯನ್ನು ಬಾದಶಾಹಿನಿಯವರೇ ಕೇಳಬೇಕಲ್ಲದೆ ಬೇರೆಯವರು ಅದನ್ನು ಕೇಳಲಾಗದೆಂದು ನಾನು ಇನ್ನೊಮ್ಮೆ ಒತ್ತಿ ಹೇಳುತ್ತೇನೆ. "

ನಿಜವಾಗಿ ಆ ದ್ವಿಹೀನನು ಬಹಳ ಗೊಂದಲದಲ್ಲಿ ಬಿದ್ದನು, ಮತ್ತು ಆ ವೃದ್ಧನ ಹಟಮಾರಿತನವನ್ನೂ-ಸ್ಥಿರತ್ವವನ್ನೂ ನೋಡಿ ಆ ಕಾರ್ಯವಾದರೂ ಏನಿರುವದೋ ತಿಳಿದುಕೊಳ್ಳಬೇಕೆಂಬ ಅವನ ಕುತೂಹಲವು ಬಹಳಾಗಿ ಹೆಚ್ಚಿತು. ಅವನು ತುಸು ಮುಂದೆ ಬಂದನು, ತನ್ನ ಭಾರವಾದ ಮೋರೆಯನ್ನು ಮುಂದೆ ಚಾಚಿ ತನ್ನ ಜೋತಾಡುವ ಕಂದು ಬಣ್ಣದ ಸಮುದ್ರ ಪಾಚಿಯಂತಿರುವ ( sponge ) ಕೈಗಳನ್ನು ತನ್ನ ಮುಂದಿರುವ ಹಳದೀಬಣ್ಣದ ಕಲ್ಲಿನಿಂದ ಮಾಡಿದ ಮೇಜಿನ ಮೇಲಿಟ್ಟು ಅಂದನು.

" ಮುದುಕನೆ, ಬಾದಶಾಹಿನಿಗಷ್ಟೇ ಸಂಬಂಧಿಸಿದ ಸಂಗತಿಯಾಗಿದ್ದರೂ ಕೂಡ ಅದನ್ನು ನಾನು ತಿಳಿಯಲೇಬೇಕು. ನೀನು ಅದನ್ನು ನನಗೆ ಹೇಳದಿದ್ದರೆ ನಿಶ್ಚಯವಾಗಿ ನೀನು ಆಕೆಯನ್ನು ಎಂದೂ ನೋಡಲಾರೆ. ನಿನ್ನ ಕಾರ್ಯವೇನಿರುವದೆಂಬದು ನನಗೆ ಗೊತ್ತಾಗದಿದ್ದರೆ ನಾನು ನಿನ್ನನ್ನು ಒಳಗೆ ಎಂದಾದರೂ ಹೋಗಗೊಡುವೆನೆ? ನೀನೊಬ್ಬ ಪಾಖಂಡಿ-ಧರ್ಮಬಾಹ್ಯ-ಮನುಷ್ಯನಾಗಿದ್ದು, ನಿನ್ನ ನಿಲುವಂಗಿಯೊಳಗೆ ಶಸ್ತ್ರವನ್ನು ಗುಪ್ತವಾಗಿಟ್ಟುಕೊಂಡು, ಧರ್ಮಾಭಿಮಾನಿಯಾದ ಚಕ್ರ

ವರ್ತಿನಿಯನ್ನು ಕೊಲೆಮಾಡಲೋಸುಗ ಬಂದಿರುವದಿಲ್ಲೆಂದು ಯಾರು ಹೇಗೆ ಹೇಳಬೇಕು ? ''

ಆ ವೃದ್ಧನು ಹಿಂದು ಮುಂದೆ ನೋಡದೆ ನಿಸ್ಸಂಧಿಗ್ಧನಾಗಿ ಅವನಿಗೆ ಅಂದನು '' ನನ್ನ ಕಾರ್ಯವನ್ನು ಇದ್ದಕ್ಕಿದ್ದಂತೆ ನಿನಗೆ ತಿಳಿಯಪಡಿಸು ವೆನು. ಆದರೆ ಹಾಗೆ ಮಾಡುವದರಿಂದ ಏನಾದರು ಅಪಾಯ ತಟ್ಟಿದರೆ ಯಾವದಾದರು ಗದ್ದಲವೆದ್ದರೆ ಅದಕ್ಕೆಲ್ಲ ನೀನೇ ಹೊಣೆಗಾರನೆಂಬದನ್ನು ಮಾತ್ರ ಮರೆಯಬೇಡ. ಈ ಹುಡುಗನು ಬಾದಶಾಹಿನಿಯಾದ ಥಿಯೋ ಡೋರಾಳ ಮಗನು ಹತ್ತು ವರುಷಗಳ ಹಿಂದೆ ಒಂದು ತಿಂಗಳ ಕೂಸು ಇದ್ದಾಗ ಆಕೆ ಇವನನ್ನು ನಮ್ಮ ಮಠದಲ್ಲಿರಿಸಿ ಹೋದಳು. ಈ ಕಾಗದ ವನ್ನು ನೋಡು. ಅಂದರೆ ನಾನು ಹೇಳಿದ್ದೆಲ್ಲ ನಿಸ್ಸಂಶಯವಾದದ್ದೂ ಸೂರ್ಯಪ್ರಕಾಶದಂತೆ ಸ್ವಚ್ಛವಾದದ್ದೂ, ಸ್ಪಷ್ಟವಾದದ್ದೂ ಇರುವ ದೆಂದು ನೀನು ಮನಗಾಣುವೆ. ''

ಆ ತೃತೀಯ*ಪ್ರಕೃತಿಯ ಬೇಸೀಲನು ಆ ಕಾಗದವನ್ನು ತನ್ನ ಕೈಯಲ್ಲಿ ಹಿಡಿದುಕೊಂಡು ಆ ಹುಡುಗನನ್ನು ದಿಟ್ಟಿಸಿ ನೋಡಿದನು. ಅವನ ಮುಖಲಕ್ಷಣವನ್ನೂ, ತೀಡಿ ಮಾಡಿದ ಅವಯವಗಳನ್ನೂ ನೋಡಿ ಆಶ್ಚರ್ಯದಿಂದ ಬೆರಗಾದನು. ಮತ್ತು ಈ ಅತಿ ಗೂಢವಾದ ಸಂಗತಿ ಯನ್ನೇ ಆಧಾರ ಮಾಡಿಟ್ಟುಕೊಂಡು ಸ್ವಂತ ಲಾಭವನ್ನು ಹೇಗೆ ಮತ್ತು ಎಷ್ಟರ ಮಟ್ಟಿಗೆ ಮಾಡಿಕೊಳ್ಳಲಾದೀತೆಂಬ ಬಗ್ಗೆ ತನ್ನ ಮನಸ್ಸಿ ನಲ್ಲಿಯೇ ಎಣಿಕೆ ಮಾಡತೊಡಗಿದನು. ನಿಜವಾಗಿ '' ಈ ಹುಡುಗನ ಹೋಲಿಕೆಯು ಚಕ್ರವರ್ತಿನಿಯ ಹೋಲಿಕೆಯಂತೆಯೇ ಇದೆ. ತದ್ರೂಪ ನಾಗಿದ್ದಾನೆ. '' ಎಂದು ವಿಚಾರ ಮಾಡುವಷ್ಟರಲ್ಲಿಯೇ ಅವನಿಗೆ ಮತ್ತೊಂದು ಸಂಶಯ ಬಂದಂತಾಯಿತು. ಆತನು ಆ ವೃದ್ಧನಿಗೆ ಅಂದನು. ಎಲೈ ಮುದುಕನೇ ಕರ್ಮ—ಧರ್ಮ ಸಂಯೋಗದಿಂದ ಈ ಹುಡುಗನ ಮುಖಲಕ್ಷಣವೂ, ಇಡೀ ಮೈಮಾಟವೂ ನಮ್ಮ ರಾಣೀ ಸಾಹೇಬರಂತೆಯೇ ಇರುವದೇನೊ ನಿಜ; ಆದರೆ ಈ ಹುಡುಗನ

---

* ಇಂತಹ ಜನರನ್ನು ಬೇಕೆಂದು ಅಂತಃಪುರದ ಕಾವಲಾಗಿಡುವದು ಸಹಜವದೆ. ಇವರಿಗೆ '' ಕೊಜ್ಜ '' ಎಂದು ಅನ್ನುವ ರೂಢಿಯುಂಟು.

ತಾಯಿಯು ಬೆರೊಬ್ಬಳು ಏಕೆ ಇರಕೂಡದು? ಈ ಆಕಸ್ಮಿಕವಾದ ಸಾಮ್ಯವನ್ನೇ ನೀನು ಸೇವನ ಮಾಡಿಕೊಂಡು ನಿನ್ನ ಸ್ವಂತ ಲಾಭವನ್ನು ಮಾಡಿಕೊಳ್ಳಲಿಕ್ಕೆ ಬಂದಿರುವದಿಲ್ಲಷ್ಟೆ! ''

ಆ ವೃದ್ಧನು '' ಈ ಪ್ರಶ್ನೆಗೆ ಒಂದೇ ಒಂದು ಉತ್ತರವಿರುವದು. ಅದೇನೆಂದರೆ ನಾನು ತಮ್ಮ ಮುಂದೆ ಇಷ್ಟು ಹೊತ್ತಿನತನಕ ವಿವರಿಸಿದ ಸಂಗತಿಯು ನಿಜವಾಗಿರುವದೋ ಇಲ್ಲವೊ ಎಂಬದನ್ನು ಸ್ವತಃ ತಮ್ಮ ಚಕ್ರವರ್ತಿನಿಯವರನ್ನೇ ಕೇಳಿ ನೋಡಿರಿ! ಅವರ ಮಗನು ದೊಡ್ಡವನಾಗಿ ಸುಕ್ಷೇಮವಾಗಿ ಸುಖದಿಂದಿರುವನೆಂಬ ಸವಿಯಾದ ಸುವಾರ್ತೆಯನ್ನು ಅವರಿಗೆ ತಿಳುಹಿಸಿರಿ. ''

ಧೀರಗಂಭೀರವಾದ ಸ್ವರದಿಂದಲೂ, ದಿಟ್ಟತನದಿಂದಲೂ ಕೊಟ್ಟ ಗಟ್ಟಿಮುಟ್ಟಿಯಾದ ಉತ್ತರವನ್ನು ಕೇಳಿದ ಮೇಲೆ, ತನ್ನ ಕೈಯಲ್ಲಿರುವ ಕಾಗದವೇ ಈ ಗೂಢ ಸಂಗತಿಗೆ ಸಾಕಷ್ಟು ಸಾಕ್ಷಿಯಾಗಿರುವದೆಂಬದನ್ನು ಅರಿತ ತರುವಾಯ, ಆ ಹುಡುಗನ ಸುಂದರವಾದ ಅವಯವ ಸೌಷ್ಟವವನ್ನು ನಿರೀಕ್ಷಿಸಿದ ಬಳಿಕ, ಆ ಪಾರುಪತ್ಯಗಾರನಿಗೆ ಬಂದ ಸಂಶಯವು ಸಂಪೂರ್ಣವಾಗಿ ದೂರಾಯಿತು. ಅವನು ತನ್ನಷ್ಟಕ್ಕೆ ತಾನೇ '' ಅಹಹ, ಇದು ಎಷ್ಟು ಸುಂದರವಾದ ಸಂದರ್ಭ? ಎಂತಹ ಸುಯೋಗವು! ಇದನ್ನು ಸ್ವಂತ ಹಿತಕ್ಕಾಗಿ ಹೇಗೆ ಮತ್ತು ಎಷ್ಟರಮಟ್ಟಿಗೆ ಉಪಯೋಗಿಸಿಕೊಳ್ಳಬೇಕು? '' ಇದರಿಂದ ನನಗೆ ಏನು ಲಾಭವಾದೀತು? ಎಷ್ಟಾದೀತು! ಎಂದು ಅನ್ನುತ್ತ ತನ್ನ ಗಾತ್ರವಾದ ಗದ್ದವನ್ನು ತನ್ನ ಕೈಯಲ್ಲಿ ಹಿಡಿದುಕೊಂಡು ನಿಂತಿರಲು ಅವನ ತಂತ್ರಮಯವಾದ ಮಿದುಳಿನಲ್ಲಿ ತರಂಗತರಂಗವಾಗಿ ಕುವಿಚಾರಗಳು ಬರತೊಡಗಿದವು.

'' ಎಲೈ ಮುದುಕನೇ, ಈ ಗುಹ್ಯವಾದ ಸಂಗತಿಯನ್ನು ನೀನು ಇನ್ನೆಷ್ಟು ಜನರಿಗೆ ಈ ಮೊದಲೇ ತಿಳುಹಿಸಿರುವಿ? ''

'' ಈ ಗುಪ್ತ ಮಾತು ನನಗೊಬ್ಬನಿಗೆ ಗೊತ್ತಿದೆ. ಡೀಕನ್‌ಬರ್ಡಾಸನೊಬ್ಬನಿಗೆ ತಿಳಿದಿದೆ. ನಮ್ಮಿಬ್ಬರ ವಿನಃ ಜಗತ್ತಿನೊಳಗೆ ಇದನ್ನಾರೂ ಅರಿಯರು '' ಎಂದು ಆ ವೃದ್ಧನು ಹೇಳಿದನು? ''

" ಇದು ಸತ್ಯವಷ್ಟೇ ? "

" ನಿಸ್ಸಂದಿಗ್ಧವಾದ ನಿಸ್ಸಂಶಯವಾದ ಸತ್ಯವು. "

ಆ ಪಾರುಪತ್ಯಗಾರನು† ತನ್ನ ಮನಸ್ಸಿನಲ್ಲಿ ಒಂದು ಆಲೋಚನೆಯನ್ನು ಸ್ಥಿರಗೊಳಿಸಿದನು. ಇಡೀ ಅರಮನೆಯಲ್ಲಿ ತನಗೊಬ್ಬನಿಗೇ ಈ ಗೌಪ್ಯವು ಗೊತ್ತಿದೆಂದ ಬಳಿಕ ಸರ್ವಾಧಿಕಾರಿಯಾದ ತನ್ನ ಯಜಮಾನಳು ತನ್ನ ಕೈಯಲ್ಲಿದ್ದಂತಾಯಿತು. ಆಕೆ ತನ್ನ ಕೈಗೂಸಾದಳು. ಬಾದಶಹನಿಗೆ ಸುತರಾಮ ಇದರ ಸುದ್ದಿಯೇ ಗೊತ್ತಿಲ್ಲ. ಇದು ಅವನಿಗೆ ತಿಳಿದರೆ ಅವನು ನಿಜವಾಗಿಯೂ ಅಸಹ್ಯಪಟ್ಟಾನು. ಒಂದು ವೇಳೆ ಇದು ಅವನಿಗೆ ಗೊತ್ತಾದರೆ ಅವನು ತನ್ನ ಹೆಂಡತಿಯನ್ನು ನಿರಾಕರಿಸಬಹುದು. ಅರ್ಥಾತ್ ಈ ಸಂಗತಿಯು ಆತನಿಗೆ ಗೊತ್ತಾಗಬಾರದೆಂದು ಆಕೆ ಮುಂಜಾಗ್ರತೆಯ ಉಪಾಯಗಳನ್ನು ಮಾಡುವದೂ ಹಂಚಿಕೆ ಹಾಕುವದೂ ಸಹಜ. ಈ ಉಪಾಯಗಳಲ್ಲಿಯೂ, ಹಂಚಿಕೆಗಳಲ್ಲಿಯೂ, ಬೇಸಿಲನ ಅಂದರೆ ನನ್ನ ಅಂಗವಿದ್ದದ್ದುಂಟಾದರೆ ಅಂದರೆ ನನ್ನ ಮೇಲೆ ವಿಶ್ವಾಸವನ್ನಿಟ್ಟು ತಕ್ಕ ಉಪಾಯಗಳನ್ನು ನಾನೂ ಆಕೆಯೂ ಕೂಡಿ ಮಾಡಿದರೆ ಆಕೆ ಸಂಪೂರ್ಣವಾಗಿ ನನ್ನ ಕೈಯಲ್ಲಿ ಸಿಕ್ಕುಬಿದ್ದಂತೆ ಆಗಲಿಕ್ಕಿಲ್ಲವೇ ? ಅವನು ಆ ಕಾಗದವನ್ನು ಹಿಡಿದುಕೊಂಡು ಅವರಿಬ್ಬರನ್ನು ನೋಡುತ್ತ ನಿಂತಿರುವಾಗ ಮೇಲ್ಕಾಣಿಸಿದ ವಿಚಾರತರಂಗವು ಅವನ ಮನಸ್ಸಿನಲ್ಲಿ ಬಂದಿತು.

" ನೀವು ಇಲ್ಲಿಯೇ ನಿಲ್ಲಿರಿ; ತುಸು ಹೊತ್ತಿನಲ್ಲಿಯೇ ಮತ್ತೆ ನಾನು ತಿರುಗಿ ಬರುತ್ತೇನೆ " ಎಂದು ಹೇಳಿ ತನ್ನ ರೇಶ್ಮೆಯ ನಿಲುವಂಗಿಯು ಸಳಸಳ ಸಪ್ಪಳ ಮಾಡುತ್ತಿರಲು ಅವನು ತನ್ನ ಕೋಣೆಯಿಂದ ಹೊರಬಿದ್ದನು.

ತುಸು ಹೊತ್ತಿನಲ್ಲಿಯೆ ಆ ಕೋಣೆಯ ಆಚೆ ಬದಿಗಿದ್ದ ಪಡದೆಯು ತೆರೆಯಲ್ಪಟ್ಟಿತು. ಮತ್ತು ಆ ಪಾರುಪತ್ಯಗಾರನು ಹೊರಗೆ ಬಂದು

† ಅಂತಃಪುರಚರೋ ವೃದ್ಧೋ ವಿಪ್ರೋಗುಣಗಣಾನ್ವಿತಃ । ಸರ್ವಕಾರ್ಯಾರ್ಥಕುಶಲಃ ಕಂಚುಕೀತ್ಯಭಿಧೀಯತೆ " ಆದರೆ ಈ ಗುಣಗಳಲ್ಲೊಂದೂ ಬೇಸೀಲನಲ್ಲಿರಲಿಲ್ಲ. ಸ್ವಾರ್ಥಸಾಧನ ಕುಶಲನು ಮಾತ್ರ ಆಗಿದ್ದಾನು.

ಪಡದೆಯನ್ನು ಓರೆ ಮಾಡಿ, ತನ್ನ ಜಡವಾದ ಶರೀರವನ್ನು ಬೊಗ್ಗಿಸಿ ನೆಲ ಮುಟ್ಟಿ ಮುಜುರೆ ಮಾಡಿದನು. ಆ ಪಡದೆಯೊಳಗಿಂದ ತರುಣಳೂ ಚಟುವಟಿಕೆಯುಳ್ಳವಳೂ, ಜರತಾರೀ ಸೀರೆಯನ್ನುಟ್ಟುಕೊಂಡು, ಮೇಲೆ ಶಲ್ಲೆಯನ್ನು ಹೊದ್ದುಕೊಂಡವಳೂ ಕಾಲೊಳಗೆ ಮಿದುವಾದ ರೇಶ್ಮೆಯ ಜೋಡು ಮೆಟ್ಟಿದವಳೂ ಆದ ಒಬ್ಬ ಸ್ತ್ರೀಯು ಹೊರಗೆ ಬಂದಳು. ಆಕೆಯ ಮೈಬಣ್ಣವನ್ನಷ್ಟೇ ನೋಡಿದ ಕೂಡಲೆ ಆಕೆ ಚಕ್ರವರ್ತಿನಿಯಲ್ಲದೆ ಬೇರೆ ಯಾರೂ ಅಲ್ಲೆಂದು ಸಹಜವಾಗಿ ಹೇಳಬಹುದಾಗಿದ್ದಿತು. ವೈಭವ ಒಯ್ಯಾರಗಳಿಂದ ಕೂಡಿದ ಆಕೆಯ ನಡಿಗೆಯು, ಕಪ್ಪಾಗಿ ವಿಶಾಲವಾಗಿರುವ ಆಕೆಯ ಕಣ್ಣುಗಳಲ್ಲಿ ಕಾಣುವ ಅಧಿಕಾರದ ದರ್ಪವೂ, ಸರ್ವಾಂಗ ಸೌಷ್ಟವವೂ, ಸಂಪೂರ್ಣವಾದ ಸೌಂದರ್ಯವೂ, ಇವೆಲ್ಲ ಆಕೆ ಥಿಯೋಡರಳೇ ಇರುವಳೆಂದು ಹೇಳುತ್ತಿರುವಂತಿದ್ದವು. ಆಕೆ ಹೀನ ವಂಶದಲ್ಲಿ ಹುಟ್ಟಿ ಬೆಳೆದವಳಾಗಿದ್ದರೂ ಈಗಿನ ಕಾಲಕ್ಕೆ ಇಡೀ ರಾಜ್ಯದೊಳಗಿನ ಯಾವತ್ತು ಸ್ತ್ರೀಯರಿಗೆ ಮೇಲಾಗಿದ್ದಳು. ಆಕೆ ಮಹಾ ಮಹಿಮೆಯುಳ್ಳವಳೂ ರಮಣೀಯ ಸ್ವರೂಪಸುಂದರಿಯೂ ಆಗಿದ್ದಳು, ಆಕೆ ಆಕೇಸಿಯಸ್ ಎಂಬ ಒಬ್ಬ ಕರಡೀ ಆಡಿಸುವವನ ಮಗಳು. ಆಕೆಯ ತಂದೆಯು ಜನಮನರಂಜನೆಗಾಗಿ ಆಕೆಗೆ ಕೆಲವು ವಿನೋದದ ಮಾತುಗಳನ್ನು ಕಲಿಸಿದ್ದನು. ಆ ಎಲ್ಲ ವಿನೋದಗಳೂ ಆಕೆಯ ಬಾಲ್ಯದ ಕಿಡಿಗೇಡಿತನವೂ ಈಗ ಸಂಪೂರ್ಣಮರೆತು ಹೋಗಿದ್ದವು. ಈಗ ಆಕೆ ಮಹಾ ರಾಜನಿಗೆ ತಕ್ಕ ಮಹಾರಾಣಿಯಾಗಲಿಕ್ಕೆ ಬೇಕಾಗುವ ಗುಣಗಳನ್ನು ಚಕ್ರವರ್ತಿನಿಯಾಗಲಿಕ್ಕೆ ಬೇಕಾಗುವ ಯಾವತ್ತೂ ಸಾಮಗ್ರಿಯನ್ನೂ ಪಡೆದವಳಾಗಿದ್ದಳು.

ಆಕೆ ವೃದ್ಧರಿಬ್ಬರನ್ನೂ ಬಿಟ್ಟುಕೊಟ್ಟು, ಆ ಹುಡುಗನ ಬಳಿಗೆ ಬೇಗದಿಂದ ಬಂದು ಕೇದಗಿಯ ಬಣ್ಣದ ಕೈಗಳನ್ನು ಅವನ ಹೆಗಲುಗಳ ಮೇಲಿಟ್ಟು ಅವನನ್ನು ಚನ್ನಾಗಿ ದಿಟ್ಟಿಸಿ ನೋಡಿದಳು. ಮೊದಮೊದಲು ಆಕೆಗೆ ದುಷ್ಕರವಾದ ಸಂಶಯ ಬಂದಂತೆಯೂ, ತರುವಾಯ ಆ ಹುಡುಗನ ಕಾಂತಿಮಯವಾದ ಕಣ್ಣುಗಳನ್ನು ನೋಡಿದರೆ ಅವು ತನ್ನ ಕಣ್ಣಿನ ಪ್ರತ್ಯಕ್ಷ ಪ್ರತಿಬಿಂಬವೇ ಆಗಿರುವದನ್ನು ಮನಗಂಡು ಅವನು ತನ್ನ ಮಗನೇ

ಇರುವನೆಂಬ ನಂಬಿಗೆ ಹುಟ್ಟಿದಂತೆಯೂ ಕಂಡಿತು. ಆ ಕೋಮಲ ಹೃದಯದ ಹುಡುಗನು ತನ್ನ ತಾಯಿಯ ದರ್ಪಯುಕ್ತವಾದ ದೃಷ್ಟಿಯನ್ನು ನೋಡಿದ ಕೂಡಲೆ ಹೆದರಿದನು; ಅವನ ಕೈಕಾಲುಗಳು ನಡುಗಿದವು; ಎದೆಯು ಹಾರತೊಡಗಿತು; ಆದರೆ ತುಸು ಹೊತ್ತಿನಲ್ಲಿ ಆ ದೃಷ್ಟಿಯು ಶಾಂತವಾದದ್ದೂ ಸ್ನಿಗ್ಧವಾದದ್ದೂ ಆಯಿತು. ಆಗ ಆತನಿಗೆ ತುಸು ಧೈರ್ಯ ಹುಟ್ಟಿತು. ಆತನು ಒಮ್ಮೆಲೆ "ಅವ್ವಾ, ಅವ್ವಾ" ಅನ್ನುತ್ತ ಆಕೆಯ ಕೋಮಲವಾದ ಕೈಗಳೊಳಗೆ ಸೇರಿ, ತನ್ನ ಕೈಗಳಿಂದ ಆಕೆಯ ಕೊರಳನ್ನು ಗಟ್ಟಿಯಾಗಿ ಅಪ್ಪಿಕೊಂಡು ತನ್ನ ಮೋರೆಯನ್ನು ಆಕೆಯ ಎದೆಯಮೇಲಿಟ್ಟನು. ಆ ಹುಡುಗನ ಈ ಸ್ಥಿತಿಯನ್ನು ಕಂಡು ಸ್ತ್ರೀಜನಕ್ಕೆ ಸ್ವಾಭಾವಿಕವಾದ ಅಂತಃಕರಣವು ಆಕೆಯ ಮನಸ್ಸಿನಲ್ಲಿ ಹುಟ್ಟಿತು; ಆಕೆಯ ಮನಸ್ಸು ಕರಗಿತು; ಆಕೆ ಆವೇಗದಿಂದ ತಾನೂ ಅವನನ್ನು ಬಿಗಿಯಾಗಿ ಅಪ್ಪಿ ಕ್ಷಣಹೊತ್ತು ಎದೆಗೆ ಅವಚಿಕೊಂಡು ನಿಂತಳು. ಉತ್ತರ ಕ್ಷಣದಲ್ಲಿಯೇ ದುರ್ಬಲವಾದ ತಾಯಿಯ ಮೋಹಕ್ಕೆ ಒಳಗಾಗಿ ಆ ಹುಡುಗನನ್ನು ಸ್ವೀಕರಿಸಬೇಕೋ, ಇಲ್ಲವೇ ಸಮರ್ಥಳಾಗಿ ಸಕಲೈಶ್ವರ್ಯದ ಸ್ವಾಮಿನಿಯಾಗಿ ಆತನನ್ನು ನಿರಾಕರಿಸಬೇಕೋ ಎಂಬ ಇತ್ತಂಡ ವಿಚಾರಗಳು ಆಕೆಯ ಮನಸ್ಸಿನಲ್ಲಿ ಒಂದಕ್ಕೊಂದು ತಾಕಲಾಡಿ ತುಮುಲ ಯುದ್ಧಮಾಡತೊಡಗಿದವು. ಕಡೆಗೆ ಎರಡನೆಯ ವಿಚಾರವೇ ಗೆದ್ದಿತು. ಕೂಡಲೆ ಆಕೆ ಆ ಹುಡುಗನನ್ನು ಹಿಂದೂಡಿ ಇವರಿಬ್ಬರನ್ನೂ ಹೊರಗೆ ಹೊರಡಿಸಿಬಿಡಿರಿ ಎಂದು ಅಜ್ಞಾಪಿಸಿದಳು. ಸೇವಕರು ಅವರಿಬ್ಬರನ್ನೂ ಕೋಣೆಯ ಹೊರಗೆ ಹಾಕಿದರು. ಆಕೆ ರೇಶ್ಮಿಯಿಂದ ಮಾಡಿದ ಮಿದುವಾದ ಮಂಚದ ಮೇಲೆ ದೊಪ್ಪನೆ ಬಿದ್ದಳು. ಆವಳ ತುಟಿಗಳು ಒಣಗಿದವು; ಎದೆಯು ದಡದಡನೆ ಹಾರಲಾರಂಭಿಸಿತು. ಆ ಪಾರುಪತ್ಯಗಾರನು ಇದನ್ನೆಲ್ಲ ನೋಡುತ್ತ ಅಲ್ಲಿಯೇ ನಿಂತುಕೊಂಡಿದ್ದನು. ಕೆಲವು ನಿಮಿಷಗಳಾದ ಬಳಿಕ ಆಕೆ ತನ್ನ ಮೋರೆಯನ್ನೆತ್ತಲು ಆ ದ್ವಿಹೀನನ ಕುಟಿಲವಾದ ದೃಷ್ಟಿಯು ತನ್ನನ್ನೇ ನೋಡುತ್ತಿರುವಂತಿದ್ದಿತು. ಸ್ತ್ರೀಯರಿಗೆ ಸ್ವಾಭಾವಿಕವಾದ ಬುದ್ಧಿಯ ಸಹಾಯದಿಂದ ಆತನ ಆ ದೃಷ್ಟಿಯು ಭೀತಿದಾಯಕವಾಗಿರುವದೆಂದು ಆಕೆ ನಿಶ್ಚಯಿಸಿ "ನಾನು

ಈಗ ನಿನ್ನ ಕೈಯಲ್ಲಿ ಸಿಕ್ಕಂತಾಗಿದೆ. ಈ ಸಂಗತಿ ಬಾದಶಹನಿಗೆ ರವಷ್ಟು ಸಹ ತಿಳಿಯಲಾಗದು." ಎಂದು ಅವನಿಗೆ ಹೇಳಿದಳು.

ಅವನು ಸಂದಿಗ್ಧವಾದ ( ಎರಡು ಅರ್ಥಮಾಡಲಿಕ್ಕೆ ಬರುವಂತಹ ) ಮುಗುಳು ನಗೆ ನಗುತ್ತ ಅಂದನು. "ಮಹಾರಾಣಿಯವರೇ ನಾನು ತಮ್ಮ ದಾಸಾನುದಾಸನು; ತಮ್ಮ ಕೈಗಲ್ಲು. ತಾವು ಹೇಳಿದ್ದನ್ನು ಕೇಳಿಕೊಂಡು ಅದರಂತೆ ನಡೆಯುವ ಮನುಷ್ಯರೂಪದ ಒಂದು ಯಂತ್ರವು ಬಾದಶಹರಿಗೆ ಇದರದೇನೂ ತಿಳಿಯಬಾರದೆಂದು ತಮ್ಮ ಇಚ್ಛೆ ಇದ್ದದ್ದುಂಟಾದರೆ ಅದನ್ನು ಅವರಿಗೆ ಯಾರು ಹೇಳಬಲ್ಲರು ? "

ಆಕೆ "ನೀನು ಹೇಳದಿರಬಹುದು, ಆದರೆ ಆ ವೃದ್ಧನೂ, ಹುಡುಗನೂ ಹೇಳಬಹುದಲ್ಲವೆ ? ನಾವು ಈಗ ಏನು ಮಾಡಲಾದೀತು ? "

"ಒಂದೇ ಒಂದು ಸುರಕ್ಷಿತವಾದ ಉಪಾಯವಿರುತ್ತದೆ. "ಎಂದು ಅನ್ನುತ್ತ ಸಮುದ್ರಪಾಚಿಯಂತೆ ಇರುವ ತನ್ನ ಕೈಬೆರಳುಗಳಿಂದ ಅವನು ಆ ಅರಮನೆಯ ನೆಲವನ್ನು ತೋರಿಸುತ್ತಿದ್ದನು. ದೀಪದ ಬುಡಕ್ಕೆ ಕತ್ತಲೆ ಇರುವದಷ್ಟೇ. ಇದೇ ನ್ಯಾಯಕ್ಕನುಸರಿಸಿ ಆ ಸುಂದರವಾದ, ರಮಣೀಯವಾದ, ಸೌಖ್ಯಮಯವಾದ ಅರಮನೆಯ ಬುಡದಲ್ಲಿ ಒಂದು ಅಸಹ್ಯವಾದ, ದುಃಖಪೂರ್ಣವಾದ ನೆಲಮನೆಯಿದ್ದಿತು. ಆ ಮನೆಯೊಳಗೆ ಹೋಗಲು ಮಂದಪ್ರಕಾಶವುಳ್ಳ ದಾರಿಗಳಿದ್ದವು. ಅಲ್ಲಲ್ಲಿ ಕುರುಡು ಬೆಳಕು ಬೀಳುತ್ತಿದ್ದಿತು. ಅಲ್ಲಿರುವ ಸೇವಕರು ಮಾತಾಡಲರಿಯರು, ನೋಡಲರಿಯರು, ಕೇಳಲರಿಯರು. ಸ್ಪಷ್ಟವಾಗಿ ಹೇಳುವದೆಂದರೆ ಅವರ ನಾಲಿಗೆಗಳು ಕೊಯ್ಯಲ್ಪಟ್ಟಿದ್ದವು, ಕಣ್ಣುಗಳು ಕಿತ್ತಲ್ಪಟ್ಟಿದ್ದವು: ಅವರು ಕಿವುಡರಾಗಿದ್ದರು. ಇಂತಹ ನೆಲಮನೆಯನ್ನು ಅವನು ತನ್ನ ಬೊಟ್ಟುಗಳಿಂದ ತೋರಿಸುತ್ತಿದ್ದನು.

ಈ ಭಯಂಕರವಾದ ದೃಶ್ಯವು ಆಕೆಯ ಎದೆಯನ್ನೊಡೆದು ನೀರು ನೀರು ಮಾಡಿಬಿಟ್ಟಿತು. ಆ ಸುಂದರ ಹುಡುಗನು ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗು, ತನ್ನದೇ ಕರುಳು. ಅವನು ತನ್ನ ಮಗನೇ ಇರುವನೆಂಬದು ಆಕೆಗೆ ಸಂಪೂರ್ಣವಾಗಿ, ನಿಸ್ಸಂದೇಹವಾಗಿ ಗೊತ್ತಾಯಿತು.

ಆಕೆಗೆ ಅವನೊಬ್ಬನೇ ಮಗನು. ಆಕೆಯ ಮನಸ್ಸೂ ಅಂತಃಕರಣವೂ ಆ ಹುಡುಗನನ್ನು ಸ್ವೀಕರಿಸಬೇಕೆಂದು ಹೇಳುವಂತಿದ್ದವು. ಆದರೆ ಬಾದಶಹನ ಸಮಾಧಾನಮಾಡುವ ಬಗೆ ಹೇಗೆ? ಆಕೆ ಆತನ ಮಟ್ಟಸ್ಸು ಚನ್ನಾಗಿ ಅರಿತಿದ್ದಳು. ಪೂರ್ವವಯಸ್ಸಿನೊಳಗೆ ತಾನು ಮಾಡಿದ ನಿಂದ್ಯಕರ್ಮವನ್ನೆಲ್ಲ ಅವನು ಮರೆತು ಬಿಟ್ಟಿದನು; ಇಷ್ಟೆ ಅಲ್ಲ. ಪ್ರತ್ಯೇಕವಾದ-ವಿಶೇಷವಾದ ಜಾಹೀರನಾಮೆಯನ್ನು ಪ್ರಕಟಿಸಿ ಇಡೀ ರಾಜ್ಯದೊಳಗಿನ ಜನರು ಅದನ್ನೆಲ್ಲ ಮರೆತು ಬಿಡಬೇಕೆಂದು ಪ್ರಸಿದ್ಧಮಾಡಿ ತನ್ನ ದೋಷವನ್ನು ದೂರಮಾಡಿದ್ದನು. ಸಾರಾಂಶ ಹೊಸದಾಗಿ ಉಚ್ಚಕುಲದಲ್ಲಿ ಹುಟ್ಟಿರುವ ಕನ್ಯೆಯನ್ನು ಹೇಗೆ ಸ್ವೀಕರಿಸಬೇಕೊ ಹಾಗೆ ತನ್ನನ್ನು ಮದುವೆ ಮಾಡಿಕೊಂಡು ಮಹಾರಾಜ್ಞಿಯ ಪದವಿಯನ್ನೂ, ಬಹುಮಾನವನ್ನೂ ತನ್ನ ಅಧಿಕಾರದ ಬಲದಿಂದ ತನಗೆ ಕೊಟ್ಟಿದ್ದನ್ನು ತಮ್ಮಿಬ್ಬರಿಗೆ ಮಕ್ಕಳಿಲ್ಲೆಂಬದೇನೊ ನಿಜ. ಆದರೆ ತನ್ನ ಹೊಟ್ಟೆಯಿಂದ ಹುಟ್ಟದೆ ಇದ್ದ ಈ ಹುಡುಗನು ತನ್ನ ಮಗನೆಂದು ಅವನು ಹೇಗೆ ಮತ್ತು ಏಕೆ ಭಾವಿಸುವನು? ಇದು ಅವನಿಗೆ ಅಸಹ್ಯವೆನ್ನಿಸುವದಲ್ಲವೆ, ಒಂದುವೇಳೆ ಮರೆತುಹೋದ ತನ್ನ ಪೂರ್ವಚರಿತ್ರವು ಮತ್ತೆ ನೆನಪಿಗೆ ಬಂದು ಒಂದು ಹೋಗಿ ಮತ್ತೊಂದು ಆಗಬಹುದಲ್ಲವೆ? ತನ್ನ ಬುದ್ಧಿಚಾತುರ್ಯದಿಂದಲೂ ತನ್ನ ಆತ್ಮಪ್ರತಿಷ್ಠೆಯಿಂದಲೂ (Influence) ತನ್ನ ಮೋಹಕವಾದ ಸೌಂದರ್ಯದಿಂದಲೂ ಉಳಿದ ಸಂದರ್ಭದಲ್ಲಿ ಅವನನ್ನು ವಶಮಾಡಿಕೊಳ್ಳುವದು ಶಕ್ಯವಿದ್ದರೂ ಈ ಸಂದರ್ಭಬಲ್ಲಿ-ಅಂದರೆ ಈ ಹುಡುಗನನ್ನು ಹತ್ತಿರದಲ್ಲಿಟ್ಟುಕೊಂಡು-ಅವನ ಪ್ರೀತಿಯನ್ನು ಸಂಪಾದಿಸುವದು ಸಾಧ್ಯವಿಲ್ಲೆಂದು ಆಕೆಗೆ ಚನ್ನಾಗಿ ಗೊತ್ತಿದ್ದಿತು; ಏಕೆಂದರೆ ಇಷ್ಟು ದಿನದ ಸಹವಾಸದಿಂದ ಅವನ ಗುಣಾವಗುಣಗಳು ಆಕೆಗೆ ನೆಟ್ಟಗೆ ಗೊತ್ತಾಗಿದ್ದವು. ಇಂತಹ ಪ್ರಸಂಗದಲ್ಲಿ-ತಾನು ಅವನ ಮನಸ್ಸಿಗೆ ಬೇಡಾದದ್ದನ್ನು ಮಾಡಿದ್ದುಂಟಾದರೆ-ಕ್ಷಣಾರ್ಧದಲ್ಲಿ ಬಹುಸುಲಭವಾಗಿ ಅವನು ತನ್ನನ್ನು ನಿರಾಕರಿಸಿ ಬಿಡುವನೆಂದು ಆಕೆ ತಿಳಿದಿದ್ದಳು. ಜಗತ್ತಿನಲ್ಲಿ ಸ್ತ್ರೀ ಜಾತಿಗೆ ಎಂತಹ ಉಚ್ಚ ಪದವಿ ದೊರೆಯಲು ಶಕ್ಯವಿರುವದೊ ಅಂತಹ ಪದವಿಯೂ ಅಷ್ಟೈಶ್ವರ್ಯವೂ ತನಗೆ ಪ್ರಾಪ್ತವಾಗಿರುವವು. ಸಾರಾಂಶ

ಮೇಘಮಂಡಲವನ್ನು ಮುಟ್ಟಿದ ಮೇರುಪರ್ವತವನ್ನೇ ಅಡರಿದಂತಾಗಿದ್ದಿತು; ಇನ್ನು ಆ ಸ್ಥಳದಿಂದ ತಾನು ಚ್ಯುತಳಾದರೆ-ಅಲ್ಲಿಂದ ಬಿದ್ದರೆ ಸಪ್ತಪಾತಾಳದಲ್ಲಿ ಧುಮುಕಬೇಕಾಗುವದಲ್ಲ ಎಂಬ ಭಾವನೆಯು ಆಕೆಯ ಮನಸ್ಸಿನಲ್ಲಿ ಬಂದಿತು. ಈ ಕ್ಷಣಕ್ಕೆ ಪೃಥ್ವಿಯಲ್ಲಿ ವಿದ್ಯಮಾನವಾಗಿರುವ ಪದಾರ್ಥಗಳಲ್ಲಿ ಯಾವದನ್ನು ಬಯಸಿದರೂ ಅದು ಕ್ಷಣಾರ್ಧದಲ್ಲಿ ಆಕೆಯ ಪದತಲದಲ್ಲಿ ಬಂದು ಬೀಳುತ್ತಿದ್ದಿತು. ಒಂದು ಪದಾರ್ಥದ ಅಪೇಕ್ಷೆ ಮಾಡುವದಷ್ಟೇ ತಡ, ನಿಮಿಷಾರ್ಧದಲ್ಲಿ ಅದು ತನ್ನ ಕೈವಶವಾಗುವದು. ಇಂತಹ ಅಲೌಕಿಕವಾದ ಸಾಮರ್ಥ್ಯವನ್ನೂ, ಅನುಪಮವಾದ ಸೌಖ್ಯವನ್ನು ಕಳೆದುಕೊಳ್ಳುವದು ಉಚಿತವೆ? ಮತ್ತು ಯಾರ ಸಲುವಾಗಿ ಇವನ್ನು ಕಳೆದುಕೊಳ್ಳುವದು? ಒಬ್ಬ ಚಿಕ್ಕಹುಡುಗನ ಸಲುವಾಗಿ! ಆತ್ಮದೌರ್ಬಲ್ಯಕ್ಕಾಗಿ; ಇಂತಹ ದೌರ್ಬಲ್ಯವು ಬಾದಶಾಹಿನಿಯಾದ ತನಗೆ ಸಲ್ಲುವದೆ? ಇದೆಲ್ಲ ಏತರ ಸಲುವಾಗಿ? ಮಗನ ಮೇಲಿನ ಮೂಢತನದ-ದಡ್ಡತನದ-ಅರ್ಥವಿಲ್ಲದ ಪ್ರೀತಿಯ ಆವೇಗಕ್ಕಾಗಿ! ಈ ಸುಡುಗಾಡ ಪ್ರೀತಿಯು ಈ ಹೊತ್ತು ಬೆಳಗಿನಲ್ಲಿ ನನ್ನಲ್ಲಿ ಒಂದು ರವಷ್ಟು ಕೂಡ ಇರಲಿಲ್ಲವಲ್ಲ!! ಹೀಗೆ ವಿಚಾರಮಾಡುತ್ತ ಮಾಡುತ್ತ ಆಕೆ ಕಟ್ಟಕಡೆಗೆ ಒಂದು ನಿರ್ಧಾರವನ್ನು ಮಾಡಿದಳು. ಮಳೆಯ ನೀರನ್ನು ಬಿಟ್ಟು ಮಂಜಿನ ನೀರಿಗೆ ಕೈಯೊಡ್ಡುವದು ಮೂರ್ಖತನವು. ಈ ಕ್ಷಣಕ್ಕೆ ಸ್ಥಿರವಾಗಿ, ಸತ್ಯವಾಗಿ, ಸೌಖ್ಯಮಯವಾಗಿರುವದನ್ನು ಬಿಟ್ಟುಕೊಟ್ಟು-ಸಕಲೈಶ್ವರ್ಯವನ್ನೂ, ಸರ್ವಾಧಿಕಾರವನ್ನೂ ಕಾಲ್ಲಿನಿಂದೊದ್ದು— ಈ ಹುಡುಗನನ್ನು ಕಟ್ಟಿಕೊಂಡು ಇಬ್ಬರೂ ದಾರಿದ್ರ್ಯಪಂಕದಲ್ಲಿ ಬೀಳುವದು ಸರಿಯಲ್ಲೆಂದು ನಿಶ್ಚಯಿಸಿದಳು.

ಆ ಕಂದು ಬಣ್ಣದ ಮುಖವುಳ್ಳ ಪಾರುಪತ್ಯಗಾರನು ವಿಚಾರಮಗ್ನಳಾದ ಆಕೆಯನ್ನು ನೋಡುತ್ತಲೇ ನಿಂತಿದ್ದನು. ಅವನು "ತಾವು ಈ ವಿಷಯಲ್ಲಿ ಇಷ್ಟೇಕೆ ಗಾಬರಿಯಾಗಿರುವಿರಿ? ಈ ಕೆಲಸವನ್ನು ನನಗೆ ಒಪ್ಪಿಸಿ ಬಿಡಿರಿ. ಅವರಿಗೆ ಕೊಡಬೇಕಾದ ಶಿಕ್ಷೆಯು ಮರಣವಷ್ಟೆ? ಅದರಷ್ಟು ಸುರಕ್ಷಿತವಾದ ಉಪಾಯವು ಬೇರೊಂದು ಇದ್ದಂತೆ ಕಾಣುವದಿಲ್ಲ! ಇನ್ನು ತಮ್ಮ ಮನಸ್ಸು ಮರುಗುತ್ತಿದ್ದರೆ, ಅಂತಃಕರಣವು ಕರಗಿ

ನೀರಾಗುತ್ತಿದ್ದರೆ, ಅವರು ನೋಡಲಾರದಂತೆ, ಮಾತಾಡಲಾರದಂತೆ, ಮಾಡಬಹುದು. ಅಂದರೆ ಅವರನ್ನು ಕುರುಡರನ್ನಾಗಿಯೂ ಮೂಕರನ್ನಾಗಿಯೂ ಮಾಡಬಹುದು."

ಕೆಂಪಗೆ ಕಾಯ್ದ ಕಬ್ಬಿಣದ ಕಂಬಿಯನ್ನು ಕಣ್ಣೊಳಗೆ ಕುಕ್ಕಿ ಕುರುಡರನ್ನಾಗಿ ಮಾಡುವ ಕಠಿಣವಾದ, ಕ್ರೂರವಾದ ಕ್ರಮವೇ ಆಗ ರೂಢಿಯಲ್ಲಿದ್ದಿತು. ಇಂತಹ ಕಬ್ಬಿಣದ ಕಂಬಿಯನ್ನು ತನ್ನ ಮಗನ ಆ ಪ್ರಕಾಶಮಯವಾದ ಕಣ್ಣುಗಳಲ್ಲಿ ಚುಚ್ಚುವ ಪ್ರಸಂಗವು ನೆನಪಾದ ಕೂಡಲೆ ಆಕೆಯ ನೈಗೂದಲು ನೆಟ್ಟಗಾದವು, ಶರೀರವು ನಡುಗಿತು; ಕಂಪಿತ ಸ್ವರದಿಂದ "ಬೇಡ, ಅದು ಬೇಡ! ಮರಣವೇ ಅದಕ್ಕಿಂತ ಒಳ್ಳೆದು" ಎಂದು ಹೇಳಿದಳು.

"ಹಾಗಾದರೆ ಮರಣದ ಶಿಕ್ಷೆಯನ್ನೆ ಕೊಡೋಣ! ಮಹಾರಾಣಿಯವರೆ, ತಾವು ಒಳ್ಳೆ ಜಾಣರು! ಈ ಸದ್ದು ಅಡಗಬೇಕಾದರೆ, ಮತ್ತು ಸುರಕ್ಷಿತತೆಯು ಉಂಟಾಗಬೇಕಾದರೆ ಇದೊಂದೇ ಉತ್ಕೃಷ್ಟವಾದ ಉಪಾಯವು."

"ಆ ಮಠಾಧಿಪನ ಗತಿ ಏನು"

"ಅವನನ್ನು ಕೊಂದು ಬಿಟ್ಟರಾಯಿತು!"

"ಅವನು ಧರ್ಮವ್ಯವಸ್ಥಾಪಕ ಸಭೆಯ ಒಬ್ಬ ಸದಸ್ಯನಿರುವನಲ್ಲವೆ? ಆ ಸಭೆಗೆ ಈ ಸಂಗತಿ ಗೊತ್ತಾದರೆ! ಮೇಲಾಗಿ ಇವನು ದೀಕ್ಷೆತಕ್ಕೊಂಡ ಧರ್ಮಾಧಿಕಾರಿಯು ಇದ್ದಂತೆ ತೋರುತ್ತಿದೆ. ಆ ಸಭೆಯು ಕುಲಾಧಿಪನು ಈ ಸಂದರ್ಭದಲ್ಲಿ ಏನು ಮಾಡಬಹುದು!"

"ಒಟಗುಟ್ಟುವ ಅವನ ನಾಲಿಗೆಯನ್ನು ಕೊಯ್ದು ಮೂಕನನ್ನಾಗಿ ಮಾಡಿಬಿಟ್ಟರೆ. ತೀರಿತು! ಆ ಮೇಲೆ ಅವನು, ಆ ಸಭೆಯು, ಆ ಸಭೆಯ ಕುಲಾಧಿಪನು ಬೇಕಾದ್ದನ್ನು ಮಾಡಿಕೊಳ್ಳಲಿ! ಅರಮನೆಯಲ್ಲಿರುವ ನಾವು ಇವನನ್ನೇನು ಬಲ್ಲೆವು? ಇವನು ನಿಜವಾದ ಮಠಾಧಿಪನೋ ಇಲ್ಲವೆ ಮಠಾಧಿಪನ ಸೋಗು ಹಾಕಿಕೊಂಡು,ನಿಲುವಂಗಿಯಲ್ಲಿ

ಶಸ್ತ್ರವನ್ನು ಬಚ್ಚಿಟ್ಟುಕೊಂಡು ಬಂದ ಒಳಸಂಚುಗಾರನೋ, ಧರ್ಮ ದ್ರೋಹಿಯೊ, ರಾಜ್ಯದ್ರೋಹಿಯೊ ಯಾರು ಬಲ್ಲರು ? ''

ಆಕೆ ಮತ್ತೆ ಗಡಗುಟ್ಟಿ ನಡುಗಿದಳು, ಮಂಚದ ಮೇಲೆ ದೊಪ್ಪನೆ ಬಿದ್ದಳು.

ಆ ದ್ವಿಹೀನನು '' ಈ ಬಗ್ಗೆ ಹೆಚ್ಚಿನ ವಾಗ್ವಾದವನ್ನಾಗಲಿ, ವಿಚಾರವನ್ನಾಗಲಿ ಮಾಡುವ ಅವಶ್ಯಕತೆ ಇಲ್ಲ. ಈ ಕೆಲಸವನ್ನು ನನಗೆ ಒಪ್ಪಿಸಿದೆ ಎಂದು ಹೇಳಿಬಿಟ್ಟರೆ ಸಾಕು. ಬಾಯಿಯಿಂದ ಹೇಳಲು ತಮಗೆ ಆಗದಿದ್ದರೆ ಗೋಣು ಅಲ್ಲಾಡಿಸಿ ಸನ್ನೆಯಿಂದ ಹೇಳಿದರೂ ಆದೀತು. ಅದೇ ತಮ್ಮ ಆಜ್ಞೆ ಎಂದು ನಾನು ತಿಳಿದುಕೊಳ್ಳುತ್ತೇನೆ. ''

ಅದೇ ಕ್ಷಣಕ್ಕೆ ಥಿಯೋಡೊರಾಳ ಮನಃಚಕ್ಷುವಿನ ಮುಂದೆ ಆಕೆಯ ವೈರಿಗಳೆಲ್ಲವರೂ, ಆಕೆಯ ಅಭ್ಯುದಯ, ಉನ್ನತಿ, ಶ್ರೇಷ್ಠತೆ ಗಳನ್ನು ಕಂಡು ಹೊಟ್ಟೆಕಿಚ್ಚು ಮಾಡುವವರೂ ಬಂದು ನಿಂತಂತಾ ಯಿತು; ಒಂದು ವೇಳೆ ತಾನು ಮನೋದೌರ್ಬಲ್ಯದಿಂದ ಮೋಹಕ್ಕೊಳ ಗಾಗಿ ಮಗನನ್ನು ಸ್ವೀಕರಿಸಿದರೆ, ಮತ್ತು ಬಾದಶಹನು ತನ್ನನ್ನು ನಿರಾ ಕರಿಸಿದರೆ, ಯಾವ ಕರಡೀ ಆಡಿಸುವವನ ಮಗಳು ದೈವಯೋಗದಿಂದ ದಾರಿದ್ರ್ಯಪಂಕದಿಂದೆದ್ದು ಸೌಖ್ಯವೆಂಬ ಮೇರುಪರ್ವತವನ್ನಡರಿದ್ದಳೊ, ಥಿಯೋಡೋರಾ ಬಾದಶಾಹಿನಿಯಾಗಿದ್ದಳೊ ಆಕೆ ಪುನಃ ಸ್ವರ್ಗದಿಂದ ಪಾತಾಳದಲ್ಲಿ ಬಿದ್ದಂತೆ ಪುನಶ್ಚ ಮುಂಚಿನಗಿಂತಲೂ ಆಳವಾದ, ಅಪಾರ ವಾದ, ಅಗಾಧವಾದ ತಗ್ಗಿನಲ್ಲಿ ಬಿದ್ದಳು ಎಂದು ಹೀಯಾಳಿಸಿ, ತಿರಸ್ಕ ರಿಸಿ ಚಪ್ಪಳೆ ಇಕ್ಕಿ ನಕ್ಕಾರಲ್ಲ, ಎಂಬ ಕಲ್ಪನೆಯು ಆಕೆಯ ಮನಸ್ಸಿನಲ್ಲಿ ಬಂದಿತು. ಕೂಡಲೆ ಆಕೆಯ ಮೋರೆಯು ಗಂಟಿಕ್ಕಿತು, ಹಲ್ಲುಗಳು ಅವ ಡುಗಚ್ಚಿದವು. ಆವೇಗದಿಂದ ಕೈಮುಷ್ಟಿಮಾಡಿ '' ಹಾಗೆ ಮಾಡು '' ಎಂದು ಹೇಳಿದಳು.

ಇಂತಹ ಅಪ್ಪಣೆ ಸಿಕ್ಕ ಕ್ಷಣಾರ್ಧದಲ್ಲಿ ಪ್ರತ್ಯಕ್ಷ ಯಮದೂತ ನಂತಿರುವ ಆ ನೆಜ್ಜೆವಳನು ಕೋಣೆಯಿಂದ ಹೊರಹೊರಟನು. ಆಕೆ ಮಾತ್ರ ಚಿಟ್ಟನೆ ಚೀರುತ್ತ ಲೋಡುಗಳ ನಡುವೆ ತಲೆ ಸೇರಿಸಿ ಹುಚ್ಚಳಂತೆ

ಕೈಮುಷ್ಟಿಯಿಂದ ಅವುಗಳನ್ನು ಗಟ್ಟಿಯಾಗಿ ಹಿಡಿದುಕೊಂಡು ಬಿದ್ದು ಬಿಟ್ಟಳು.

ಅವನು ನಿಮಿಷಾರ್ಧವನ್ನು ಕೂಡ ತಡಮಾಡದೆ ತನ್ನ ಕೆಲಸಕ್ಕೆ ಹೊರಟನು. ಏಕೆಂದರೆ ಈ ಕೆಲಸವು ಒಮ್ಮೆ ಕೊನೆಗಂಡಿತೆಂದರೆ ದೂರ ದಲ್ಲಿರುವ ಏಸಿಯಾ ಖಂಡದೊಳಗಿನ ಯಾವನೊ ಒಬ್ಬ ಕ್ಷುದ್ರ, ಅಪ್ರ ಸಿದ್ಧ ಸನ್ಯಾಸಿಯನ್ನುಳಿದರೆ ಈ ಗುಪ್ತ ಸಂಗತಿಯನ್ನರಿತವನು ತಾನೊ ಬ್ಬನೆ ಇರುವದರಿಂದ ಮಹಾರಾಣಿಯು ಸಂಪೂರ್ಣವಾಗಿ ತನ್ನ ಕೈ ಕೂಸಾದಳೆಂದು ಖಂಡಿತವಾಗಿ ತಿಳಿದುಕೊಂಡನು. ಮೇಲಾಗಿ ಆ ಸನ್ಯಾ ಸಿಯು ಶಾಸನವಾದರೂ ಸಂಗಡಲೇ ಆಗತಕ್ಕದ್ದಿದ್ದಿತು. ಮಾತಾಡಲಿಕ್ಕೇ ಬಾರದಿದ್ದರೆ ಅವನೇನು ಮಾಡುವನು? ತರುವಾಯ ಎಲ್ಲರನ್ನೂ ಅಧಿ ಕಾರದ ದರ್ಪದಿಂದ ಕೈಯಲ್ಲಿರಿಸಿಕೊಳ್ಳುವಂತಹ ಸರ್ವಾಧಿಕಾರಿಯಾದ ಥಿಯೋಡರಳು ತನ್ನ ಕೈಯಲ್ಲಿ ಸಿಕ್ಕು ಬೀಳುವಳು. ಈ ಮೇರೆಗೆ ಆಲೋ ಚಿಸುತ್ತ ಅವರಿಬ್ಬರೂ (ಹುಡುಗ, ವೃದ್ಧ) ಇರುವ ಕೋಣೆಯಲ್ಲಿ ಅವ ಸರದಿಂದ ಬಂದು ಒಂದು ವಿಲಕ್ಷಣ ಸಂಜ್ಞೆಯನ್ನು ಮಾಡಿದನು. ಆಗಿನ ಕಠಿಣಕಾಲದಲ್ಲಿ ಅಂತಹ ಸಂಜ್ಞೆಯ ಅರ್ಥವು ಮರಣವೇ ಆಗಿದ್ದಿತು. ಕ್ಷಣಾರ್ಧದಲ್ಲಿ ಅಲ್ಲಿದ್ದ ಮೂಕರೂ. ಕಪ್ಪುವರ್ಣದವರೂ ಆದ ಸೇವಕ ರನೇಕರು ಆ ವೃದ್ಧನನ್ನೂ ಆ ಹುಡುಗನನ್ನೂ ಗಟ್ಟಿಯಾಗಿ ಹಿಡಿದು ಅವ ಸವಸರದಿಂದ ಅವರನ್ನು ನೂಕುತ್ತಾ ನೆಲಮನೆ ಇರುವಲ್ಲಿಗೆ ನಡೆದರು. ಆ ನೆಲಮನೆಗೆ ಹೋಗುವ ದಾರಿಯಲ್ಲಿಯೇ ಅಡಿಗೆಯ ಮನೆ ಇದ್ದಂತೆ ತೋರಿತು. ಏಕೆಂದರೆ ಅಲ್ಲಿಂದ ಹಾಯ್ದು ಹೋಗುವಾಗ ಮಧು ಮಧುರವಾದ, ಕಮ್ಮಗಾದ, ಪ್ರಲೋಭನಮಯವಾದ ಸುವಾಸವು ಎಲ್ಲೆಲ್ಲಿಯೂ ಇಡುಗಿದ್ದಿತು. ಅಲ್ಲಿಂದ ಮುಂದೆ ಹೋಗಲು ಕಬ್ಬಿಣದ ದೊಡ್ಡ ದೊಡ್ಡ ಸಲಾಕಿಗಳುಳ್ಳ ಬಾಗಿಲುವಿದ್ದಿತು. ಆ ಬಾಗಿಲವನ್ನು ತೆರೆದ ಕೂಡಲೆ ಇಳಿಜಾರಾದ ಕಲ್ಲಿನ ಪಾವಟಿಗೆಗಳಿದ್ದವು. ಅವುಗಳನ್ನು ಇಳಿದು ಮುಂದಕ್ಕೆ ನಡೆಯಲು ನೆಲಮನೆಯು ಕಾಣುತ್ತಿದ್ದಿತು. ಅಲ್ಲಲ್ಲಿ ಮಂದ ಪ್ರಕಾಶದ ದೀಪಗಳು ಗೋಡೆಗಳ ಮೇಲೆ ಮಿನುಗುತ್ತಿದ್ದವು. ಪಾವಟಿಗೆ ಸಾಲಿನ ಮೇಲ್ಭಾಗದಲ್ಲೊಬ್ಬ ಕೆಳಗೊಬ್ಬ ಕರಿಮರದ

ಮೂರ್ತಿಯಂತೆ ಕಾಣುವ ಪಹರೆಯುವರು ನಿಂತಿದ್ದರು. ಇವರು ಮೂಕರು. ಕೆಳಕೆಳಗೆ ಹೋದಂತೆ ಗವಿಯಂತಿರುವ ನೆಲಮನೆಯ ಒಂದೊಂದು ಭಾಗವು ಕಾಣುತ್ತಿದ್ದಿತು. ಅಲ್ಲಲ್ಲಿ ದೊಡ್ಡ ದೊಡ್ಡ ಗೂಡುಗಳು (ಮಾಡುಗಳು) ಇದ್ದವು. ಪ್ರತಿಯೊಂದು ಮಾಡದಲ್ಲಿ ಒಬ್ಬೊಬ್ಬ ಮೂಕ ಪಹರೆಯವನಿದ್ದನು. ದಾರಿಯು ಕತ್ತಲೆಮಯವಾಗಿದ್ಧಿತು. ಆ ದುರ್ದೈವಿಗಳಾದ ದಾರಿಕಾರರನ್ನು ದಯವಿಲ್ಲದೆ. ದರದರ ಎಳೆಯುತ್ತ ಪಾಪಟಿಗೆಯ ಸಾಲುಗಳನ್ನು ಇಳಿಸುತ್ತ ಇಳಿಸುತ್ತ ನಡೆದಿದ್ದರು. ಕಟ್ಟಕಡೆಗೆ ಅವರು ಒಂದು ಉದ್ದವಾದಂತಹ ಆಳವಾದಂತಹ ಕತ್ತಲ ಕೋಣೆಗೆ ಬಂದು ಮುಟ್ಟಿದರು- ಅಲ್ಲಿ ಚನ್ನಾಗಿ ಉಸಿರಾಡಲು ಕೂಡ ಅವಕಾಶವಿರಲಿಲ್ಲ. ನೋಡಿದಲ್ಲೆಲ್ಲ ತೇವು: ಸುತ್ತಲೆಲ್ಲ ನೀರು ತಟಗುಡುತ್ತಿದ್ದಿತು. ಇದನ್ನೆಲ್ಲ ನೋಡಿ ಆ ಪ್ರವಾಸಿಕರು ತಾವು ಸಮುದ್ರಪಾತಲಿಗೆ ಬಂದು ಮುಟ್ಟಿರಿರುವೊ ಏನೊ ಎಂದು ತಿಳಿದುಕೊಂಡರು ಅವರು ಬರುವಾಗ ಅಲ್ಲಲ್ಲಿ ಕಬ್ಬಿಣ ಸಲಾಕೆಗಳಿಂದ ಬಿಗಿ ಮಾಡಿದ ಕೋಣೆಗಳು ಅವರ ಕಣ್ಣಿಗೆ ಬಿದ್ದವು. ಆ ಕೋಣೆಯೊಳಗೆಲ್ಲ ಕತ್ತಲೆ. ಜೇನೆ ಬಿದ್ದ ದನಗಳು ನರಳುತ್ತಿರುವಂತೆ ಆ ಕೋಣೆಯೊಳಗೆ ಇರುವ ಜನರು ನರಳುವಂತೆಯೂ ಅಳುವಂತೆಯೂ ಅವರಿಗೆ ಕೇಳಿಸಿತು. ಅಯ್ಯೋ ಇಂತಹ ಆದ್ರುಮಯವಾದ ವಿಷಪೂರ್ಣವಾದ ಹವೆಯುಳ್ಳ ಈ ಪಾತಾಳದಲ್ಲಿ ಎಷ್ಟೋ ದುರ್ದೈವಿಗಳು ತಮ್ಮ ಇಡೀ ಜನ್ಮವನ್ನು ಕಳೆಯುತ್ತಿರುವರಲ್ಲ ಎಂಬ ವಿಚಾರವು ಅವರ ಮನಸ್ಸಿನಲ್ಲಿ ಬಂದು ಅವರು ಗಾಬರಿಯಾದರು.

ಈ ಕೋಣೆಯ ಒಂದು ತುದಿಗೆ ಒಂದು ಬಾಗಿಲವಿದ್ದಿತು. ಆ ಬಾಗಿಲ ತೆರೆದರೆ ಪಾತಾಳದಷ್ಟು ಆಳವಾದ ತಗ್ಗು ಇದ್ದಂತೆ ತೋರುತ್ತಿದ್ದಿತು. ವಾಚಕರೆ, ಇದು ತಗ್ಗಾಗಿರಲಿಲ್ಲ. ಇದೊಂದು ಅಗಾಧ ಅಪಾರವಾದ ಬಾವಿಯಾಗಿದ್ದಿತು. ಇಲ್ಲಿ ಯಾವ ಬಗೆಯ ಸಾಮಾನು ಸಟ್ಟು ಇರಲಿಲ್ಲ. ಆದರೆ ಮಧ್ಯದಲ್ಲಿ ಕಬ್ಬಿಣಪಟ್ಟಿಗಳುಳ್ಳ ಒಂದು ದೊಡ್ಡ ಕಟ್ಟಿಗೆಯ ಬಾಗಿಲವಿದ್ದಿತು. ಅದಕ್ಕೆ ಕೀಲಿ ಹಾಕಿತ್ತು. ಈ ಅಗಾಧ ಆಳವಾದ ಬಾವಿಯನ್ನು ಯಾರು ಯಾವ ಕಾಲದಲ್ಲಿ ಕಡಿಸಿದ್ದರೊ

ದೇವರಿಗೆಗೊತ್ತು. ಪೃಥ್ವಿಯು ಹುಟ್ಟಿದಾಗಲೆ ಈ ಬಾವಿಹುಟ್ಟಿತ್ತೊ ಏನೋ ಯಾರಿಗೂ ಹೇಳಲಿಕ್ಕೆ ಬರುವಂತಿರಲಿಲ್ಲ. ಆ ಪಾರುಪತ್ಯಗಾರನು ಅಲ್ಲಿದ್ದ ಸೇವಕರಿಗೆ ಆ ಬಾಗಿಲ ತೆರೆಯಲು ಅಪ್ಪಣೆ ಕೊಟ್ಟನು. ಇದನ್ನೆಲ್ಲ ನೋಡಿ ಆ ಚಿಕ್ಕಹುಡುಗನು ಬೆದರಿ ಚಿಟ್ಟನೆ ಚೀರುತ್ತ, ಆ ವೃದ್ಧನ ಮೈಗೆ ಅಂಟಿಕೊಂಡು ನಿಂತುಬಿಟ್ಟನು. ಆ ವೃದ್ಧನ ಮುಖವು ಬೂದಿಯಂತೆ ಬೆಳ್ಳಗಾಯಿತು.ಅವನು ನಡಗುತ್ತ ಆ ಯಮದೂತನ ಕಲ್ಲೆದೆ ಕರಗುವಂತೆ ಆರ್ತಸ್ವರದಿಂದ ಮಾತಾಡತೊಡಗಿದನು.

"ಮಹಾರಾಯರಾ, ಈ ನಿರಪರಾಧಿಯಾದ ಬಾಲಕನನ್ನು ಕೊಲ್ಲಬೇಡ; ಪಾಪ! ಅವನು ಯಾವ ಅಪರಾಧವನ್ನು ಮಾಡಿರುವನು? ಅವನು ಇಲ್ಲಿಗೆ ಬಂದದ್ದೇ ಅವನ ಮಹದಪರಾಧವೊ? ಈ ಸಂದರ್ಭದಲ್ಲಿ ನಿಜವಾದ ಅಪರಾಧಿಗಳೆಂದರೆ ನಾನು ಮತ್ತು ಡೀಕನ್ ಬಾರ್ತಾನನು. ಶಿಕ್ಷೆ ಮಾಡಲೇಬೇಕೆಂದು ನಿಶ್ಚಯಿಸಿದ್ದರೆ ನಮ್ಮಿಬ್ಬರನ್ನು ಶಿಕ್ಷಿಸಿರಿ. ನಾವು ಮುದುಕರಾಗಿದ್ದೇವೆ. ನಾವು ಇಂದೊ ನಾಳೆಯೊ ಸಾಯತಕ್ಕವರು! ಆದರೆ ಈ ಹುಡುಗನು ತೀರ ಚಿಕ್ಕವನು! ಅವನು ಸೌಂದರ್ಯದ ಖನಿಯು! ಅವನು ಇನ್ನೂ ಬಹುದಿವಸ ಬಾಳಿ ಬದುಕುವವನಾಗಿದ್ದಾನೆ. ಮಹಾರಾಯರೆ ಇಂತಹ ನಿರಪರಾಧಿಯಾದ ಸುಂದರನಾದ ಹುಡುಗನನ್ನು ಕೊಲ್ಲಬೇಕೆಂಬ ಮನಸ್ಸಾದರೂ ನಿಮಗೆ ಹೇಗೆ ಆದೀತು? ದಯಮಾಡಿರಿ ಅವನಿಗೆ ಜೀವದಾನ ಮಾಡಿರಿ!"

ಹೀಗನ್ನುತ್ತ ಆ ವೃದ್ಧನು ಆ ದ್ವಿಹೀನನ ಪಾದಕ್ಕೆ ಬಿದ್ದನು. ಆ ಹುಡುಗನು ಬಿಕ್ಕಿ ಬಿಕ್ಕಿ ಅಳುತ್ತ, ಆ ಬಾವಿಯ ಬಾಗಿಲ ತೆರೆಯುವ ಕರ್ರಗಿನ ಸೇವಕರನ್ನು ಭಯಭ್ರಾಂತ ದೃಷ್ಟಿಯಿಂದ ನೋಡತೊಡಗಿದನು. ಆ ಪಾರುಪತ್ಯಗಾರನು ಆ ಮಠಾಧಿಪನ ಬಿನ್ನಹವನ್ನಾಲಿಸದೆ, ಆ ಬಾವಿಯ ಕುಂಬಿಯ ಮೇಲಿದ್ದ ಒಂದು ಕಲ್ಲನ್ನು ತಕ್ಕೊಂಡು ಬಾವಿಯ ಆಳವು ಎಷ್ಟಿದೆಯೋ ಎಂಬದನ್ನು ನೋಡುವವನಂತೆ ಅದನ್ನು ಬಾವಿಯಲ್ಲಿ ಬಿಸುಟನು. ಅದು ಹಳೆದಾದ, ತೇವವುಳ್ಳ, ಮಂಜುಮಯವಾದ ಗೋಡೆಗಳಿಗೆ ಕಟಕಟ ಎಂದು ಬಡಿಯುತ್ತ ಭೂಮಿಯ ತಳಕ್ಕೆ

ಅತಿಶಯ ಆಳವಾದ ತಗ್ಗಿನಲ್ಲಿ ಡವ್ ಎಂದು ಬಿದ್ದಂತೆ ಸಪ್ಪಳವಾಯಿತು ತರುವಾಯ ಆ ಸಜ್ಜೆವಳನು ಅಲ್ಲಿದ್ದ ಕರ್‍ರಗಿನ ಸೇವಕರಿಗೆ ಮತ್ತೆ ಕೈಸನ್ನೆ ಮಾಡಲು ಅವರು ಹದ್ದಿನಂತೆ ಆ ಹುಡುಗನ ಮೇಲೆ ಎರಗಿ ಅವನನ್ನು ವೃದ್ಧನಿಂದ ಬಿಡಿಸಿಕೊಂಡು ಬಾವಿಯ ಬಳಿಗೆ ಎಳೆದೊಯ್ದರು. ಆ ಹುಡುಗನು ಇಷ್ಟು ಗಟ್ಟಿಯಾಗಿ ಚಿಟ್ಟನೆ ಚೀರಿದನಲ್ಲ ಆ ಗದ್ದಲದಲ್ಲಿ ಅಲ್ಲಿಗೆ ಅಕಸ್ಮಾತ್ತಾಗಿ ಬಂದ ಬಾದಶಾಹಿನಿಯನ್ನು ಯಾರೂ ನೋಡಲಿಲ್ಲ. ಆಕೆ ಕೋಣೆಯಲ್ಲಿ ಬಹು ಒತ್ತರದಿಂದ ನುಗ್ಗಿ ಬಂದು ತನ್ನ ಎರಡೂ ಕೈಗಳಿಂದ ಆ ಹುಡುಗನನ್ನು ಅಪ್ಪಿಕೊಂಡಳು.

**ಆಕೆ:—** " ಎಲೈ ಸೇವಕರೆ, ಛಿ: ಛಿ: ಅವನನ್ನು ಬಾವಿಯಲ್ಲಿ ನೂಕಬಾರದು; ಅದನ್ನೆಂದೂ ಮಾಡಲಾಗದು. ನನ್ನ ಪ್ರಿಯ ಮಗು, ನನ್ನ ಅರಗಿಳಿಯೇ, ಮುದ್ದುಮಗನೆ, ಗಾಬರಿಯಾಗಬೇಡ. ಅವರು ನಿನಗೆ ಏನೂ ಅಪಾಯ ಮಾಡಲಾರರು. ನಾನು ಹುಚ್ಚಳಂತೆ ವರ್ತಿಸಿದೆನು; ಇಂತಹ ಮಾತು ಕನಸುಮನಸ್ಸಿನಲ್ಲಿ ಬರಲು ಕೂಡ ಶಕ್ಯವಿಲ್ಲ. ಮುದ್ದು ಮಗನೆ ನಿನ್ನನ್ನು ಹತ್ತು ತಿಂಗಳು ಹೊತ್ತು-ಹಡೆದವಳೇ ನಿನ್ನನ್ನು ಕೊಲ್ಲಿಸುವ ವಿಚಾರ ಮಾಡಿದಳು, ಎಂಬ ಸಂಗತಿ ಎಷ್ಟು ಭಯಂಕರವಾದದ್ದು !

ಆಕಸ್ಮಿಕವಾದ ಈ ಸಂಗತಿಯಿಂದಲೂ, ಸ್ತ್ರೀಯರಿಗೆ ಸಹಜವಾದ ಚಂಚಲ ಸ್ವಭಾವದ ಮೂಲಕವಾಗಿಯೂ ತಾನು ಕೈಕೊಂಡ ಕಾರ್ಯವು ಕೊನೆಗಾಣದ್ದನ್ನು ನೋಡಿ ಆ ಸಜ್ಜೆವಳನು ತನ್ನ ಹುಬ್ಬುಗಂಟಿಕ್ಕಿ ಅಂದನು. " ಮಹಾರಾಣಿಯವರೆ; ಅವರನ್ನು ಕೊಲ್ಲುವದು. ತಮ್ಮ ಕೋಮಲವಾದ ಮನಸ್ಸಿಗೆ ಬಾರದಿದ್ದರೆ, ನಾವು ಆ ಗೋಜಿಗೆ ಏಕೆ ಹೋಗೋಣ ? ಒಂದು ಚೂರಿಯಿಂದಾಗಲಿ, ಕಾಯ್ದ ಕಬ್ಬಿಣದ ಕಂಬಿಯಿಂದಲೂ ಅವರು ಎಂದೂ ಮಾತಾಡದಂತೆಯೂ, ಅತ್ತಿತ್ತ ನೋಡದಂತೆಯೂ ಮಾಡಿಬಿಟ್ಟಾರಾಯಿತು ! "

ಆಕೆ ಅವನ ಈ ಮಾತುಗಳನ್ನೇ ಕಿವಿಯ ಮೇಲೆ ಹಾಕಿಕೊಳ್ಳಲಿಲ್ಲ.

ತನ್ನ ಮಗುವನ್ನು ಕುರಿತು ಮಾತಾಡಿದಳು. " ಮಗು, ನನಗೆ ಮುದ್ದು ಕೊಡು; ನಿನ್ನ ಮೃದು ಮಧುರವಾದ ಅಧರಗಳ (ತುಟಿಗಳ) ಅಮೃತದಿಂದ ನನ್ನನ್ನು ಸಂತೋಷಗೊಳಿಸು. ಪುನಃ ಚುಂಬಿಸು; ಇನ್ನು ಸಾಕು. ಇದಕ್ಕೇ ಮೋಹಗೊಂಡರೆ ಮುಂದಿನ ಕೆಲಸವು ಕೊನೆಗಾಣದು. ಪೂಜ್ಯರಾದ ವೃದ್ಧರೆ, ತಾವು ಸ್ವಾಭಾವಿಕವಾಗಿಯೇ ಮೃತ್ಯುಲೋಕದ ದಾರೀ ಹಿಡಿದಿರುವಿರಿ; ಸನ್ಮಾನವನ್ನೂ, ಸಾದರ ಸದ್ಭಕ್ತಿಯನ್ನೂ ಹುಟ್ಟಿಸುವಂತಹ ತಮ್ಮ ಮುಖಲಕ್ಷಣವನ್ನು ನೋಡಿದರೆ ಸುಳ್ಳು ಮಾತುಗಳು ತಮ್ಮ ಬಾಯಿಯಿಂದ ಎಂದೂ ಹೊರಡಲಾರವೆಂದು ನಾನು ನೆರೆ ನಂಬಿದ್ದೇನೆ. ಈ ಹೊತ್ತಿನವರೆಗೆ ನನ್ನ ಈ ಗುಹ್ಯ ಗೋಷ್ಠಿಯನ್ನು ಗುಪ್ತವಾಗಿಯೇ ಇಟ್ಟಿರುವಿರಲ್ಲವೆ?; ಅದನ್ನು ಬೇರೆ ಯಾರೂ ಅರಿತಿಲ್ಲವಷ್ಟೆ?"

" ಮಹಾರಾಣಿಯೆ, ನಿಜವಾಗಿಯೂ ಈ ಸಂಗತಿಯು ಗುಪ್ತವಾಗಿಯೇ ಇದೆ. ನನ್ನ ಕುಲಸ್ವಾಮಿಯಾದ ಸೆಂಟ ನಾಯಸಫೋರಸನ ಆಣೆ ಮಾಡಿ ಹೇಳುತ್ತೇನೆ, ಇದು ಮುದುಕನಾದ ಡೀಕಸ್ ಬಾರ್ಡಸನಿಗೆ, ನನಗೆ ಗೊತ್ತಿರುವದಲ್ಲದೆ ಬೇರೆ ಯಾರೂ ಇದನ್ನು ಅರಿಯರು."

" ಹಾಗಾದರೆ ಇದು ಇನ್ನು ಮುಂದಾದರೂ ಗುಪ್ತವಾಗಿಯೇ ಇರಲಿ. ಈ ಹೊತ್ತಿನ ಮಟ್ಟಿಗೆ ಇದನ್ನು ಯಾರಿಗೂ ಹೇಳಿಲ್ಲೆಂದ ಬಳಿಕ ಇನ್ನು ಮುಂದಾದರೂ ನೀವು ಇದನ್ನು ಯಾರಿಗೂ ಹೇಳಲಾರಿರೆಂದು ನಾನು ತಿಳಿಯುತ್ತೇನೆ."

ತರುವಾಯ ಆಕೆ ಕಾಠಿಣ್ಯ ಪ್ರೀತಿಗಳಿಂದ ಸಮ್ಮಿಶ್ರವಾದ ತನ್ನ ಕಮನೀಯವಾದ ಕಣ್ಣುಗಳನ್ನು ಕೆಕ್ಕರಿಸಿ ತನ್ನ ಮಗನೆಡೆಗೆ ಮೋರೆದಿರುವಿ " ನಾನು ನಿನ್ನನ್ನು ನಿಸ್ಸಂದೇಹವಾಗಿ ನಂಬಬಹುದಲ್ಲವೆ? ನೀನು ಈ ಸಂಗತಿಯನ್ನು ಕಡೆತನಕ ಗುಪ್ತವಾಗಿ ಇಡುವಿಯಷ್ಟೆ? ಈ ಗೂಢವು ಬಯಲಿಗೆ ಬಂದರೆ ನಿನಗೇನೂ ಲಾಭವಿಲ್ಲ; ಆದರೆ ನಿನ್ನ ತಾಯಿಯಾದ ನಾನು ಮಾತ್ರ ನಾಶಹೊಂದಿ ರಸಾತಲದಲ್ಲಿ ಬೀಳಬೇಕಾದೀತು!"

"ಅಪ್ಪಾ, ಅಪ್ಪಾ, ನನ್ನಿಂದ ನಿನಗೆ ಏನೂ ಅಪಾಯ ತಟ್ಟಲಾರದೆಂದು ನೆರೆನಂಬು. ನಿನ್ನಾಣೆಯೆಂದರೂ ಇದನ್ನು ಎಂದೂ ಯಾರಿಗೂ ಹೇಳ ಲಾರೆನು "

"ಹಾಗಾದರೆ ನಾನು ನಿಮ್ಮಿಬ್ಬರನ್ನೂ ನಿಸ್ಸಂದೇಹವಾಗಿ, ನಿಶ್ಚಯವಾಗಿ ನೆರೆನಂಬುತ್ತೇನೆ. ನನ್ನ ಅರಮನೆಗೆ ಬಂದ ಸುದಿವಸವು ಕಡೆತನಕ ನಿಮ್ಮ ನೆನಪಿನಲ್ಲಿರುವಂತೆ ಈ ಹೊತ್ತಿನಿಂದ ನಿಮ್ಮ ದೇವಾಲ ಯದ ಎಲ್ಲ ಕಾರ್ಯಗಳು ಸುಸೂತ್ರ ಸಾಗುವದಕ್ಕೂ, ನಿಮ್ಮೆಲ್ಲರಿಗೂ ಈ ಲೋಕದಲ್ಲಿ ದೊರೆಯಬಹುದಾದ ಯಾವತ್ತು ಸುಖಸಮಾಧಾನಗಳು ಸುಲಭವಾಗಿ ಸಿಕ್ಕುವದಕ್ಕೂ ಏನೇನು ಏರ್ಪಾಡು ಮಾಡಬೇಕೋ ಅದ ನ್ನೆಲ್ಲ ನಾನು ಬಲು ಸಂತೋಷದಿಂದ ಮಾಡುತ್ತೇನೆ. ಇನ್ನು ಮೇಲೆ ನೀವು ಇಲ್ಲಿಂದ ಹೋಗಬಹುದು. ನೀವು ಇನ್ನು ಮುಂದೆ ನನ್ನನ್ನು ಕಾಣಲು ಎಂದೂ ಬರಬೇಡಿರಿ. ಏಕೆಂದರೆ ನಿಮ್ಮನ್ನು ನೋಡಿ ಒಂದು ವೇಳೆ ನಾನು ಮೋಹಕ್ಕೊಳಗಾದರೆ ನನ್ನ ನಾಶವು ಸಂಪೂರ್ಣವಾಗಿ ಆಗಬಹುದು. ಇಲ್ಲವೆ ಆ ಬಗೆಯ ಮೋಹವುಂಟಾಗದೆ ನಾನು ಕ್ರೂರ ಳಾಗಿದ್ದರೆ. ನೀವು ನಿಮ್ಮ ಜೀವಾ ಕಳೆದುಕೊಳ್ಳಬಹುದು. ಆದರೆ ಇನ್ನೊಂದು ಸಂಗತಿಯನ್ನು ನಾನು ನಿಮಗೆ ಇನ್ನೊಮ್ಮೆ ಒತ್ತಿಯಾಗಿ ಆಗ್ರಹಪೂರ್ವಕವಾಗಿ ಹೇಳುತ್ತೇನೆ. ಅದೇನಂದರೆ ಯಾರ ತಪ್ಪಿನಿಂದಾ ಗಲಿ, ಯಾವದೇ ಕಾರಣದಿಂದಾಗಲಿ ಈ ಗುಹ್ಯಸ್ಫೋಟವಾಯಿತೆಂದು ನನಗೆ ಯಾರಾದರೂ ಹೇಳಿದರೆ, ಇಲ್ಲವೆ ಹಾಗಾದ ಬಗ್ಗೆ ನನಗೆ ಸಂಶಯ ಬಂದರೆ ನಿಮ್ಮ ದೇವಾಲಯವೂ, ನೀವೂ ನಿಮ್ಮವರೆಲ್ಲರೂ ಲೋಕವಿಲ ಕ್ಷಣವಾದ, ನಿಷ್ಠುರವಾದ, ಘೋರತಮವಾದ ಶಿಕ್ಷೆಗೆ ಪಾತ್ರರಾಗುವಿ ರೆಂಬದನ್ನು ಮಾತ್ರ ಎಂದೂ ಮರೆಯಬೇಡಿರಿ. ರಾಜದ್ರೋಹ ಮಾಡಿ ದರೆ ಎಷ್ಟು ಕಠಿಣವಾದ ಪರಿಣಾಮವುಂಟಾಗುತ್ತದೆಂಬದನ್ನು ಜನರು ನಿಮ್ಮ ಸಮೂಲ ನಾಶನನ್ನು ನೋಡಿ ತಿಳಿದುಕೊಳ್ಳಲಿ. "

ಆ ವೃದ್ಧನು ಅಂದನು. " ನಾನು ಈ ಸಂಗತಿಯನ್ನು ಯಾರಿಗೂ ಎಂದೂ ಹೇಳುವದಿಲ್ಲ; ಡೀಕನ್ನನು ಏನೂ ಮಾತಾಡನು. ಈ ಹುಡು

ಗನೂ ಚಕಾರ ಶಬ್ದ ತೆಗೆಯನು! ಈ ಮೂವರ ಬಗ್ಗೆ ನಾನು ಹೊಣೆಯಾಗುವೆನು. ಆದರೆ ಈ ಸಂಗತಿಯನ್ನು ಅರಿತವರು ಇಲ್ಲಿ ಅನೇಕರಿರುವರು. ಇದು ನೋಡಿರಿ, ಇಲ್ಲಿ ಅನೇಕ ಸೇವಕರಿದ್ದಾರೆ. ನಿಮ್ಮ ಮುಖ್ಯ ಪ್ರಧಾನರಿದ್ದಾರೆ. ಇವರು ಈ ಗೂಢವನ್ನು ಬಯಲಿಗೆ ತಂದರೆ ಅವರ ಅಪರಾಧಕ್ಕಾಗಿ ಅನ್ಯಾಯದಿಂದ ನಿರಪರಾಧಿಗಳಾದ ನಾವು ದಂಡಕ್ಕೆ, ಶಿಕ್ಷೆಗೆ ಗುರಿಯಾಗಬಹುದಷ್ಟೆ? ''

ಚಕ್ರವರ್ತಿನಿಯು ಕಣ್ಣುಗಳನ್ನು ಕೆಂಡದಂತೆ ಕೆಂಪಗೆ ಮಾಡಿ ಅಂದಳು. " ಹಾಗೆ ಆಗದು; ಹೆದರಬೇಡಿರಿ. ಈ ಸೇವಕರೆಲ್ಲರು ಧ್ವನಿ ಹೀನರು; ( ಅವರಿಗೆ ಮಾತಾಡಲು ನಾಲಿಗೆಯೇ ಇಲ್ಲ. ) ಮೇಲಾಗಿ ಈ ಗುಹೆಯನ್ನು ಬಿಟ್ಟು ಹೊರಗೆ ಅವರು ಎಲ್ಲಿಯೂ, ಎಂದೂ ಹೋಗಲಾರರು; ಇನ್ನು ಹೇಳುವದಂತೂ ಒತ್ತಟ್ಟಿಗಿರಲಿ. ಎಲೈ ಬೇಸಿಲನೆ, "ನೀನು ಮಾತ್ರ'' ಎಂದೆನ್ನುತ್ತ ತುಸು ಹೊತ್ತಿನ ಪೂರ್ವದಲ್ಲಿ ಆ ಹುಡುಗನನ್ನು ಬಾವಿಯ ಬಳಿಗೆ ಎಳೆದೊಯ್ಯಬೇಕೆಂದು ಯಾವ ಭಯಂಕರವಾದ, ಎದೆಯನ್ನು ಒಡೆದು ನೀರು ಮಾಡುವಂತಹ ಕೈಸನ್ನೆಯನ್ನು ಬೇಸಿಲನು ಮಾಡಿದ್ದನೊ ಅಂತಹ ಕ್ರೂರವಾದ ಸನ್ನೆಯನ್ನು ಮಾಡಿದಳು. ಕೂಡಲೆ ಆ ಕಪ್ಪು ಬಣ್ಣದ ಸೇವಕರೆಲ್ಲರೂ ನಾಯಿಗಳು ಚಿಗರಿಯನ್ನು ಮುತ್ತಿ ಹರಿಯುವಂತೆ ಆ ದ್ವಿಹೀನನನ್ನು ಹಿಡಿದು ಎಳೆಯಲಾರಂಭಿಸಿದರು.

ಭ್ರಾಂತಿಷ್ಟನಾಗಿ ದೊಡ್ಡಧ್ವನಿಯಿಂದ ಅವನು ಚೀರಿ ಅಂದನು. " ಆಶ್ರಿತವತ್ಸಲಳಾದ ಮಹಾರಾಣಿಯೇ, ದಯಾಳು ದೊರೆಸಾನಿಯೇ ಇದೇನು ? ಏನು ಮಾಡಬೇಕೆನ್ನುವಿರಿ! ನನ್ನನ್ನು ಕೊಲ್ಲುವ ವಿಚಾರವು ಇಲ್ಲವಷ್ಟೆ? ಚಿಃ ಆ ವಿಚಾರವು ತಮ್ಮ ಮನಸ್ಸಿನಲ್ಲಿ ಎಂದೂ ಬರಲರಿಯದು ! ನಾನು ಯಾವ ಅಪರಾಧವನ್ನು ಮಾಡಿದ್ದೇನೆ? ಯಾವ ತಪ್ಪಿನ ಗೋಸುಗ ನಾನು ಸಾವಿಗೆ ಗುರಿಯಾಗಬೇಕು ? ''

" ನೀನು ನನ್ನ ಮೇಲೆಯೇ ತಿರುಗಿ ನಿಂತೆ! ನನ್ನ ಹೊಟ್ಟೆಲೆ ಹುಟ್ಟಿದ ಹುಡುಗನನ್ನು ಕೊಲ್ಲಲಿಕ್ಕೆ ಹಾತೊರೆದು ಒತ್ತಾಯದಿಂದ ನನ್ನ ಆಜ್ಞೆಯನ್ನು ಪಡೆದೆ! ಈ ಗೂಢವಾದ ಸಂಗತಿಯನ್ನು ನನ್ನ

ನಾಶಕ್ಕಾಗಿ ಉಪಯೋಗಿಸಬೇಕೆಂದು ಆಲೋಚಿಸಿದೆ! ನಿನ್ನ ಕಣ್ಣುಗಳನ್ನು ನೋಡಿದ ಕೂಡಲೆ ಈ ಕುಟಿಲ ಕುಯುಕ್ತಿಯು ನಿನ್ನ ಮನಸ್ಸಿನಲ್ಲಿ ಬಂದಿರುವದೆಂದು ನಾನು ಕೂಡಲೆ ತಿಳಿದಿದ್ದೆನು. ಕ್ರೂರನೆ, ಪ್ರಾಣಘಾತಕನೆ, ನೀನು ನವ (ಹೆರೆಯುಚ್ಚಿದ) ಹಾವಿಗಿಂತಲೂ ಕ್ರೂರನು;

ಸರ್ಪಃ ಕ್ರೂರಃ ಖಲಃ ಕ್ರೂರಃ ಸರ್ಪಾತ್ ಕ್ರೂರತರಃ ಖಲಃ ।
ಮಂತ್ರೌಷಧಿವಶಃ ಸರ್ಪಃ ಖಲಃ ಕೇನ ನಿವಾರ್ಯತೇ ॥೧॥

ಸರ್ಪವು ಸ್ವಭಾವತಃ ಕ್ರೂರವಿರುವದೇನೊ ನಿಜ ಆದರೆ ದುಷ್ಟ ಮನುಷ್ಯನು ಹಾವಿಗಿಂತಲೂ ಹೆಚ್ಚು ಕ್ರೂರನು. ಏಕೆಂದರೆ ಮಂತ್ರಗಳಿಂದಾಗಲಿ, ಔಷಧಗಳಿಂದಾಗಲಿ ಹಾವಿನ ವಿಷದ ಭಾದೆಯಿಂದ ಮುಕ್ತನಾಗಲು ಶಕ್ಯವಿದೆ. ಆದರೆ ದುಷ್ಟನು ಯಾತರಿಂದಲೂ ವಶನಾಗುವದಿಲ್ಲ.

ವಿಷಧರತೋಽಪ್ಯತಿ ವಿಷಮಃ ಖಲ ಇತಿನ ಮೃಷಾವದಂತಿ
ವಿದ್ವಾಂಸಃ
ಯದಯಂ ನಕುಲದ್ವೇಷೀ ಸಕುಲದ್ವೇಷೀ ಪುನಃ ಪಿಶುನಃ

ದುಷ್ಟನು ಹಾವಿನಗಿಂತಲೂ ಹೆಚ್ಚು ಕೆಟ್ಟ ಎಂದು ವಿದ್ವಾಂಸರು ಹೇಳುವ ಮಾತು ಸುಳ್ಳಲ್ಲ. ಏಕೆಂದರೆ ಹಾವು ನಕುಲವನ್ನಷ್ಟೆ-ಮುಂಗಲಿಯನ್ನಷ್ಟೆ-ದ್ವೇಷಿಸುತ್ತಿದೆ ಆದರೆ ದುಷ್ಟನು ಕುಲವಂತನನ್ನೂ ಅಕುಲವಂತನನ್ನೂ, ಸಜ್ಜನರನ್ನೂ, ದುರ್ಜನರನ್ನೂ ಸಾರಾಂಶ ಎಲ್ಲರನ್ನೂ ದ್ವೇಷಿಸುತ್ತಾನೆ.

ದುಷ್ಟನೆ, ಖಳನೆ ನೀನು ಅನೇಕಾನೇಕ ನಿರಪರಾಧಿಗಳಿಗೆ ನಿರರ್ಥಕವಾಗಿ ಮರಣದ ಶಿಕ್ಷೆಯನ್ನು ಕೊಟ್ಟಿರುವೆ! ಅದನ್ನೇ ನೀನೂ ಈಗ ಅನುಭವಿಸು. ಪಾಪಿಯಾದ ನಿನಗೆ ಇಂತಹ ಮರಣವೇ ತಕ್ಕಶಿಕ್ಷೆಯು. ನಿನ್ನಂತಹ ಮೂರ್ಖನ ಸಂಗಡ ಹೆಚ್ಚಿನ ಮಾತಿನ ಪ್ರಯೋಜನವೇನು?"

ಆ ಹುಡುಗನೂ, ಮುದುಕನೂ ಭಯಭ್ರಾಂತರಾಗಿ ಆ ಪ್ರೇತಾಲಯದ-ನೆಲಮನೆಯ-ಹೊರಗೆ ಹೋಗಲು ಹೊರಟರು. ತುಸು ಹಿಂದುರುಗಿ ನೋಡಲು, ನೀಟಾಗಿ ನಿಂತಂಥ, ದೃಢಸಂಕಲ್ಪವುಳ್ಳ, ಸ್ಥಿರ

ಪ್ರತಿಜ್ಞಳಾದ, ರೇಶ್ಮೆಯ ದುಕೂಲವನ್ನುಟ್ಟುಕೊಂಡಂತಹ ಚಕ್ರವರ್ತಿನಿಯೂ ಕಾಣಿಸಿದಳು. ಅತ್ತಾಚೆಗೆ ಹಾವಸೆಗಟ್ಟಿದ ಬಾವಿಯ ಬಾಯಿಯೂ ಕರಿಬಣ್ಣದ ಸೇವಕರು ಎಳೆದೊಯ್ಯುವಾಗ ತನ್ನನ್ನು ಮುಕ್ತವಾಡ ಬೇಕೆಂದು ಆರ್ತ ಧ್ವನಿಯಿಂದ ಒದರುವ ಆ ಸಜ್ಜೆವಳನ ಕೆಂಪಾದ ಬಾಯಿಯೂ ಕಣ್ಣಿಗೆ ಬಿದ್ದವು. ಆ ಆಳುಗಳು ಅವನನ್ನು ಬಾವಿಯ ಬಳಿಗೆ ಎಳೆದೊಯ್ದು ಅದರಲ್ಲಿ ನೂಕಿಸಿಬಿಟ್ಟರು. ಆ ಭಯಂಕರವಾದ, ಕಿವಿಗಳನ್ನು ಗಡಚಿಕ್ಕುವಂತಹ ಸಪ್ಪಳವು ತಮಗೆ ಕೇಳಿಸಬಾರದೆಂದು ಅವರು ತಮ್ಮ ಕಿವಿಗಳನ್ನು ಮುಚ್ಚಿಕೊಂಡರು. ಆದಾಗ್ಯೂ ಹೆಂಗಸಿನ ಧ್ವನಿಯಂತೆ ಇರುವ ಆ ಪಾಪಿಯ ಕಟ್ಟಕಡೆಯ ಚೀರಾಟವೂ, ಭೂಲೋಕದ ಮೇಲೇ ಪಾತಾಲದಷ್ಟು ಆಳವಾಗಿರುವ ಬಾವಿಯಲ್ಲಿ ಅವನು ಢಮ್ಮೆಂದು ಬಿದ್ದ ಸಪ್ಪಳವೂ ಎಲ್ಲರಿಗೂ ಸ್ಪಷ್ಟವಾಗಿ ಕೇಳಿಸಿದವು.

ಪ್ರಿಯ ವಾಚಕರೆ, ಈ ಚಿಕ್ಕ ಕಥೆಯು ಇಲ್ಲಿಗೆ ಮುಗಿಯಿತು. ಆದರೆ ಇದರಿಂದ ನಾವು ಏನು ಬೋಧ ತೆಗೆದುಕೊಳ್ಳಬಹುದೆಂಬದನ್ನು ಹೇಳಿದರೆ ಅಪ್ರಸ್ತುತವಾಗಲಾರದೆಂದು ನಂಬುತ್ತೇನೆ. ನಮ್ಮ ಪೂರ್ವಜರು ಯಾವದಾದರೊಂದು ವ್ರತೋಪವಾಸ ಇಲ್ಲವೆ ಕಥೆ ಪುರಾಣಗಳನ್ನು ವಿವರಿಸಿದ ಬಳಿಕ ಅವುಗಳ ಫಲಶ್ರುತಿಯನ್ನು— ಅಂದರೆ ಅವುಗಳಿಂದ ಹೇಳಿದವರು, ಕೇಳಿದವರು, ಬರೆದವರು, ಓದುವವರು ಯಾವ ಬಗೆಯ ಫಲವನ್ನು ಪಡೆಯುವರೆಂಬುದನ್ನು—ತಪ್ಪದೆ ಹೇಳುತ್ತಾ ಬಂದಿರುತ್ತಾರೆ. ಅದೇ ಕ್ರಮವನ್ನನುಸರಿಸಿ ಇದರಿಂದ ನಾವು ಏನು ಕಲಿತುಕೊಳ್ಳಬಹುದೆಂಬದನ್ನು ಸಂಕ್ಷಿಪ್ತವಾಗಿ ವಿವರಿಸುವೆನು.

ಇದರಲ್ಲಿಯ ಮುಖ್ಯಪಾತ್ರಗಳು ನಾಲ್ಕು ಅಥವಾ ಐದು

(೧) ಬಾದಶಾಹಿನಿಯಾದ ಥಿಯೋಡೋರಾಳು (೨) ಮುಖ್ಯ ಪಾರುಪತ್ಯಗಾರನಾದ ಬೇಸಿಲನು (೩) ಮಠಾಧಿಪನಾದ ಲ್ಯೂಕನು (೪) ಬಾಲಕನಾದ ಲಿಯೋನ್ (೫) ಬಾದಶಹನಾದ ಜಸ್ಟಿನನ್

ಯೌವನಂ ಧನಸಂಪತ್ತಿಃ ಪ್ರಭುತ್ವಮವಿವೇಕತಾ।<br>
ಏಕೈಕಮಪ್ಯನರ್ಥಾಯ ಕಿಮು ತತ್ರ ಚತುಷ್ಟಯಃ '' ॥೧॥

**ಅರ್ಥ:**— "ನೂತನ ತಾರುಣ್ಯವೂ, ಗರ್ಭಶ್ರೀಮಂತತನವು, ಅಲೌಕಿಕ ಸಾಮರ್ಥ್ಯವು, ಅನುಪಮ ಅವಿವೇಕತನವೂ ಇವುಗಳಲ್ಲಿ ಒಂದೇ ಒಂದು ಮನುಷ್ಯನನ್ನು ಮಣ್ಣು ಪಾಲು ಮಾಡಲು ಸಾಕು: ಇನ್ನು ನಾಲ್ಕೂ ಒತ್ತಟ್ಟಿಗೆ ಕೂಡಿದರೆ ಕೇಳುವುದೇನಿದೆ?" ಈ ನಿಯಮಕ್ಕನುಸರಿಸಿ ಬಡವನ ಮಗಳಾದರೂ ಸೌಂದರ್ಯಶಾಲಿನಿಯಾದ ಥಿಯೋಡೋರಾಳು ಪೂರ್ವ ವಯಸ್ಸಿನಲ್ಲಿ ನಿಂದ್ಯಕರ್ಮವನ್ನು ಮಾಡಿದಾಗ್ಯೂ ಪೂರ್ವಸಂಚಿತ ಪುಣ್ಯಪ್ರಭಾವದಿಂದ ಆಕೆ ಇಹಲೋಕದಲ್ಲಿ ಅತ್ಯುತ್ಕೃಷ್ಟವಾದ ಪದವಿಯನ್ನು ಪಡೆದಳು. ಸರ್ವರಿಂದ ಸೇವಿಸಲ್ಪಡುವಳು; ಸರ್ವ ಭೋಗಗಳನ್ನು ಭೋಗಿಸುವಳು. ಸರ್ವರಿಂದಲೂ ಸನ್ಮಾನಿಸಲ್ಪಡುವಳು. "ಸರ್ವೇ ಗುಣಾಃ ಕಾಂಚನಮಾಶ್ರಯಂತೇ" ದುಡ್ಡೇ ದೊಡ್ಡಪ್ಪ. ಈ ಬಗ್ಗೆ ರಾಮಾಯಣದೊಳಗೆ ಒಂದು ಒಳ್ಳೆ ಹೃದಯಸ್ಪರ್ಶಿಯಾದ, ಮಾರ್ಮಿಕವಾದ ಚಿಕ್ಕ ಆಖ್ಯಾಯಿಕೆಯುಂಟು. ಇದನ್ನು ಮೊನ್ನೆ ಮೊನ್ನೆ ನನ್ನ ಮಿತ್ರರೊಬ್ಬರು ಹೇಳಿದರು. ಶ್ರೀ ರಾಮಚಂದ್ರನು ಸೀತಾ ಲಕ್ಷ್ಮಣ ಸಮೇತನಾಗಿ ವನವಾಸಕ್ಕೆ ಹೊರಟಾಗ ದಾರಿಯಲ್ಲಿ ಭರದ್ವಾಜ ಋಷಿಗಳ ಆಶ್ರಮದಲ್ಲಿ ಉಳಿದನು. ಋಷಿಗಳು ಮೂವರನ್ನೂ ಆಶ್ರಮದಲ್ಲಿಟ್ಟುಕೊಂಡು, ತಪಸ್ವಿಗಳಿಗೆ ಉಚಿತವಾದ ಆದರಾತಿಥ್ಯವನ್ನು ಮಾಡಿದರು. ಗಡ್ಡೆಗೆಣಸುಗಳನ್ನು ತಿನ್ನಲಿಕ್ಕೂ ಸ್ವಚ್ಛವಾದ ನೀರನ್ನು ಕುಡಿಯಲಿಕ್ಕೂ ವಿಶ್ರಮಿಸುವದಕ್ಕೆ ತಕ್ಕ ಸ್ಥಳವನ್ನೂ ಕೊಟ್ಟು, ಮರುದಿನ ರಾಮನು "ಹೋಗಿಬರುತ್ತೇನೆ." ಎಂದು ಹೇಳಿದ ಕೂಡಲೆ ಅವರನ್ನು ಆಶೀರ್ವದಿಸಿ ಕೂಡಲೆ ಅನುಜ್ಞೆಯನ್ನಿತ್ತರು. ಈ ಸಂಗತಿ ಸಂಭವಿಸಿ ಹದಿನಾಲ್ಕು ವರ್ಷಗಳು ಸಂದಿ ಹೋದವು. ರಾಮಚಂದ್ರನ ವನವಾಸ ಕಾಲವೂ ಕಾರ್ಯವೂ ಮುಗಿದುವು; ಖರ, ಮಾರೀಚ, ಸುಬಾಹು, ರಾವಣ ಕುಂಭಕರ್ಣಾದಿ ರಾಕ್ಷಸರನ್ನು ಸದೆಬಡೆದು, ಅಗ್ನಿಮುಖದಿಂದ ಸೀತಾಶುದ್ಧಿಯ ಕಾರ್ಯ ತೀರಿಸಿಕೊಂಡು, ಪುಷ್ಪಕ ವಿಮಾನವನ್ನೇರಿ, ಸುಗ್ರೀವಾದಿಗಳ ಸಹಿತ ಅಯೋಧ್ಯೆಗೆ ತಿರುಗಿ ಹೋಗುವಾಗ ಅದೇ ಭರದ್ವಾಜ ಮುನಿಗಳ ಆಶ್ರಮವು ಬಂದಿತು. ಮುನಿಗಳಿಗೆ ವಂದಿಸಿ, ಅವರ ಆಶೀರ್ವಾದಗಳನ್ನೂ ಅಪ್ಪಣೆಯನ್ನೂ ಪಡೆದುಕೊಂಡು ಮುಂದೆ

ತೆರಳುವದು ಯುಕ್ತವಾಗಿ ತೋರಿತಾದುದರಿಂದ ಶ್ರೀರಾಮನು ಆಶ್ರಮದೊಳಗೆ ಹೊಕ್ಕನು. ಋಷಿಗಳು ಅವನನ್ನು ಕಂಡ ಕೂಡಲೆ ಎದ್ದು ಮುಂದೆ ಬಂದು ಅವನನ್ನು ಅಪ್ಪಿಕೊಂಡು, ಬಾ, ದೇವ ದೇವನೆ, ಬಾ, ಕೂತುಕೊ, ಎಂದು ಹೇಳಿದರು. ಶ್ರೀರಾಮನು ಮುನಿಶ್ರೇಷ್ಠರೆ "ಪರಿಜನರು ಬಹಳ ಇರುವರು, ಮುಂದೆ ಅನುಕೂಲ ಸ್ಥಳವನ್ನು ನೋಡಿ ಅಲ್ಲಿ ಇಳಿದು, ಭೋಜನವನ್ನು ತೀರಿಸಿಕೊಂಡು, ನಿಯಮಿತ ಕಾಲದಲ್ಲಿಯೇ ಅಯೋಧ್ಯೆಗೆ ಹೋಗಬೇಕಾಗಿದೆ. ನಿಮಿಷ ತಡವಾದರೆ ಭರತನಿಗೆ ಪ್ರಾಣ ಸಂಕಟ ಒದಗುವಂತಿದೆ. ದಯಮಾಡಿ ಹೋಗಲಪ್ಪಣೆ ಕೊಡಬೇಕು." ಎಂದು ಬೇಡಿಕೊಂಡನು. ಮುನಿಗಳು "ಚಿಃ ರಾಮನೆ, ಬಹಳ ಹೊತ್ತಾಗಿದೆ. ಉಪವಾಸ ಹೋಗಬಹುದೆ? ಅಲ್ಪೋಪಹಾರ ತೀರಿಸಿಕೊಂಡು ಹೋಗಬೇಕು." ಎಂದು ಹೇಳಿ ಒಳ್ಳೆ ಆಗ್ರಹದಿಂದ ಸಪರಿವಾರನಾದ ರಾಮಚಂದ್ರನನ್ನು ಇಟ್ಟುಕೊಂಡು ನಂದಿನಿ ಕಾಮಧೇನುಗಳ ಸಹಾಯದಿಂದ ರಾಜಯೋಗ್ಯವಾದ ಅನುರೂಪವಾದ ಆದರ–ಸತ್ಕಾರವನ್ನು ಮಾಡಿದನು. ಶ್ರೀ ರಾಮನು ಇಂತಹ ಅತ್ಯುತ್ಕೃಷ್ಟವಾದ ಅಭೂತ ಪೂರ್ವವಾದ, ಅನುಪಮೆಯವಾದ ಆದರಾತಿಥ್ಯವನ್ನು ನೋಡಿ ಆನಂದಾಶ್ಚರ್ಯಗಳಿಂದ ಬೆರಗಾಗಿ ಮುನಿಗಳನ್ನು ಏಕಾಂತದಲ್ಲಿ ಕಂಡು "ಮುನಿಶ್ರೇಷ್ಠರೆ, ವನವಾಸಕ್ಕೆ ಹೋಗುವಾಗ ಈ ಆಶ್ರಮಕ್ಕೆ ಬಂದ ರಾಮನು ನಾನೇ, ಈಗ ಅಯೋಧ್ಯೆಗೆ ತಿರುಗಿ ಹೋಗುವಾಗ ಈಗ ಬಂದ ರಾಮನು ನಾನೇ; ಹೀಗಿದ್ದು ಆಗಿನ ತಮ್ಮ ಆದರಾತಿಥ್ಯವನ್ನು ಈಗಿನ ಆದರಾತಿಥ್ಯಕ್ಕೆ ಸರಿಹಚ್ಚಿ ನೋಡಿದರೆ ಭೂಮ್ಯಾಕಾಶದಷ್ಟು ಅಂತರವಿದೆ. ಹೀಗಾಗಲು ಏನು ಕಾರಣವಿರಬಹುದೊ ನಾನರಿಯೆ" ಮುನಿಗಳು ಮುಗುಳು ನಗೆ ನಕ್ಕು

> ಅವಸ್ಥಾ ಪೂಜ್ಯತೆ ರಾಮ ಶರೀರಂ ನೈವ ಪೂಜ್ಯತೆ ।
> ತದಾನೀಂ ತಾಪಸೀರಾಮ ಇದಾನೀಂ ರಾಜಮಹೇಶ್ವರಃ॥೧॥

ಆಗ ನೀನು ತಪಸ್ವಿಯಾಗಿದ್ದಿ; ತಪಸ್ವಿಗೆ ತಕ್ಕ ಉಪಚಾರವೇ ಆಗ ತಕ್ಕದ್ದಾಗಿದ್ದಿತು. ಈಗ ನೀನು ಅರಸನಾಗಿರುವಿ ಆದುದರಿಂದ ರಾಜಯೋಗ್ಯ

ತಕ್ಕ ಆದರಾತಿಥ್ಯವನ್ನು ಮಾಡುವದೇ ಈಗ ಯೋಗ್ಯವಾಗಿದೆ. ಪೂಜಿಸ ಲ್ಪಡುವದು ಅವಸ್ಥೆಯು ಶರೀರವಲ್ಲ '

ಕರಡೀ ಆಡಿಸುವವನ ಮಗಳಾದ ಥಿಯೋಡೋರಾ ಅವಳೇ ಬಾದ ಶಾಹಿಣಿಯಾದ ಥಿಯೋಡೋರಾ ಅವಳೇ. ಆದಾಗ್ಯೂ " ಅಂದಿನ ಮಾತು ಅಂದೇ, ಇಂದಿನ ಮಾತು ಇಂದೇ " ಎಂಬ ನಾಣ್ಣುಡಿಗೆ ಸರಿಯಾಗಿ ಆಕೆಗೆ ಎಲ್ಲರೂ ಮಾನ್ಯ ಕೊಡತ್ತಿದ್ದರು. ವಾಚಕರೆ, ಇಂತಹ ಅಧಿಕಾರ ಸಂಪನ್ನಳೂ, ಶ್ರೀಮಂತಳೂ ಇದ್ದರೂ ಕೂಡ ಪೂರ್ವವಯಸ್ಸಿನಲ್ಲಿಯ ತನ್ನ ಮಗನ ಮೇಲಿನ ಮೋಹವು ಎಷ್ಟು ಅನಾವರವಾಯಿತು ನೋಡಿರಿ; ಇದರ ಮೇಲಿಂದ ಸ್ಪಷ್ಟವಾಗಿ ಕಂಡು ಬರುವದೇನಂದರೆ ಮಾತೃ ಪ್ರೇಮವು ಎಲ್ಲ ಪ್ರೇಮಗಳಗಿಂತಲೂ ಹೆಚ್ಚಿನದು. ಪಶುಪಕ್ಷಿಗಳು ಕೂಡ ಮರಿಗಳು ದೊಡ್ಡವಾಗುವ ತನಕ ಮಿತಿಮೀರಿದ ಅಪತ್ಯಪ್ರೇಮ ವನ್ನು ಮಾಡುತ್ತವೆ. ಮಕ್ಕಳ ಬೆಳವಣಿಗೆಗೆ ತಾಯಿಯ ಮೊಲೆಹಾಲಿ ಗಿಂತಲೂ ತಾಯಿಯ ಪ್ರೇಮವೇ ಹೆಚ್ಚಿನದು. ಪ್ರೇಮದಿಂದಲೇ ಮೊಲೆ ಯಲ್ಲಿ ಹಾಲು ಹುಟ್ಟುತ್ತಿದೆ. ಆದುದರಿಂದಲೆ ಈ ಚಿಕ್ಕ ಕಥೆಗೆ **" ಮಾತೃಪ್ರೇಮ"** ಎಂಬ ಹೆಸರಿಟ್ಟಿದೆ. ಪ್ರೇಮರಸವೇ ದುಗ್ಧರಸ ವೆನ್ನಬಹುದು. ಆದುದರಿಂದಲೇ ನಮ್ಮ ಪೂರ್ವಜರು " ಮಾತೃ ದೇವೋ ಭವ " ಎಂದು ಹೇಳಿದ್ದಾರೆ. ಸುಪ್ರಸಿದ್ಧ ಬಂಗಾಲಿ ನಾಟಕಕಾರ ರಾದ ದ್ವಿಜೇಂದ್ರಲಾಲರಾಯರು ವಂಗಭಾಷೆಯಲ್ಲಿ " ಭೀಷ್ಮಾ " ವೆಂಬ ನಾಟಕವನ್ನು ಬರೆದಿದ್ದು ಅದನ್ನು " ರಂಗಭೂಮಿ " ಮತ್ತು " ಮಕ್ಕಳ ಪುಸ್ತಕ " ಮಾಸಪತ್ರಿಕೆಗಳ ಸಂಪಾದಕರಾದ ಶ್ರೀ ಭಾರದ್ವಾಜರವರು ಕನ್ನಡಿಸುವರು. ಅದರಲ್ಲಿ ಭೀಷ್ಮನು ಅಂಬೆಗೆ ತಾಯಿಯ ವರ್ಣನೆಯನ್ನು ಮಾಡಿ ತೋರಿಸಿದ್ದಾನೆ. ಅದು ಎಷ್ಟು ಸರಸವಾಗಿದೆ ನೋಡಿರಿ !

" ನಿನಗೇನು ಗೊತ್ತು ? ಮಾತೆ ಎಂಬ ಹೆಸರಿನಲ್ಲಿ ಎಷ್ಟು ಶಕ್ತಿ ಇರುವದೆಂದು ನಿನಗೆ ಗೊತ್ತಿರಲಾರದು ! ಮಾತೆಯ ನಾಮದಲ್ಲಿರುವಂಥ ಅಮೃತವು ಇಂದ್ರನ ಭಾಂಡಾರದಲ್ಲಿ ಕೂಡ ಸಿಕ್ಕುವದಿಲ್ಲ ! ರೋಗ ಶಯ್ಯೆಯ ಮೇಲೆ ನರಳುತ್ತಿರುವ ರೋಗಿಯು ಆತುರನಾಗಿ ಯಾವಾಗ

"ಅವ್ವಾ ಅವ್ವಾ" ಎಂದು ತನ್ನ ತೀವ್ರ ಯಾತನೆಯನ್ನು ಪ್ರಕಟ ಮಾಡುವನೊ ಆವಾಗ ಅವನ ಯಾತನೆಯ ಅರ್ಧಭಾಗವು, ಆ ಅಮೃತ ಸರೋವರದಲ್ಲಿ ಮುಳಗಿ, ಕರಗಿ ಹೋಗಿ ರೋಗಿಗೆ ಸ್ವಲ್ಪ ಶಾಂತಿಯು ದೊರೆಯುವದು. ಮಾತೆಯ ನಾಮದಿಂದ ಪಶುವು ಕೂಡ ವಶವಾಗುವನು. ಮಾತೆಯ ನಾಮವು ಶೋಕದಿಂದ ತಪ್ತವಾದ ಹೃದಯವನ್ನು ಶೀತಲವಾಗಿ ಮಾಡುವದು. ಮಾತೆಯ ನಾಮವು ಆನಂದದಿಂದ ನಲಿದಾಡುವ ನಾಲಿಗೆಯಲ್ಲಿ ಅಡಗಿಕೊಂಡಿರುವದು ಅದು ಹೊರಕ್ಕೆ ಬರುವದಿಲ್ಲ. ಅದು ಆರ್ತರ ಒಣ ತುಟಿಗಳ ಮೇಲೆ ಕಂಪಿಸುವದು, ಗಾಳಿಯಲ್ಲಿ ನರ್ತಿಸುವದು. ಮಾತೆಯೆಂಬ ನಾಮದಿಂದ ಪೃಥ್ವಿಯು ಧನ್ಯವಾಗಿರುವಳು. ಮಾತೆ ಎಂಬ ಹೆಸರನ್ನು ಹೊಂದಿ ಸ್ವಯಂ ಜಗದೀಶ್ವರಿಯಾದ ಗೌರಿಯು ತಾನೇ ಧನ್ಯಳೆಂದು ತಿಳಿದಿರುವಳು."

ಮನು ತನ್ನ ಸ್ಮೃತಿಯಲ್ಲಿ ತಾಯಿಯ ಗೌರವವನ್ನು ಹೀಗೆ ಬಣ್ಣಿಸಿದ್ದಾನೆ.

"ಉಪಾಧ್ಯಾಯಾನ್ ದಶಾಚಾರ್ಯಃ ಆಚಾರ್ಯಾಣಾಂ
ಶತಂ ಪಿತಾ।
ಸಹಸ್ರಂತು ಪಿತೄನ್ಮಾತಾ ಗೌರವೇಣಾತಿರಿಚ್ಯತೆ ।।

ಮನುಸ್ಮೃತಿ (೨—೧೪೫)

**ಅರ್ಥ:—** ಹತ್ತುಮಂದಿ ಉಪಾಧ್ಯಾಯರಿಗಿಂತಲೂ ಒಬ್ಬ ಆಚಾರ್ಯರು ಶ್ರೇಷ್ಠರು. ನೂರುಮಂದಿ ಆಚಾರ್ಯರಿಗಿಂತಲು ತಂದೆಯು ಹೆಚ್ಚಿನವನು, ಸಾವಿರ ತಂದೆಗಳ ಗೌರವಕ್ಕಿಂತಲೂ ತಾಯಿಯ ಗೌರವವು ಹೆಚ್ಚಿನದು.

ವಾಚಕರೆ, ಥಿಯೋಡರಳು ಇಷ್ಟು ಅಧಿಕಾರ ಸಂಪನ್ನಳೂ, ಸುಖಸಾಗರದಲ್ಲಿ ಓಲಾಡುವವಳೂ, ಬೇಕಾದಾಗ ಬೇಕಾದ ವ್ಯಕ್ತಿಯನ್ನು ಬೇಕಾದಷ್ಟು ಸುಖಿಯನ್ನಾಗಲಿ, ದುಃಖಿಯನ್ನಾಗಲಿ ಮಾಡುವಷ್ಟು ಸಮರ್ಥಳೂ ಇದ್ದಾಗ್ಯೂ ತಾನು ಪೂರ್ವ ವಯಸ್ಸಿನಲ್ಲಿ ಕಾಲು ತಪ್ಪಿ ಮಾಡಿದ ನಿಂದಕ ಕರ್ಮವು ಬೈಲಿಗೆ ಬರಬಾರದೆಂಬ ಬಗ್ಗೆ ಎಷ್ಟು ಪ್ರಯತ್ನ

ಪಡಬೇಕಾಯಿತು. ನೋಡಿರಿ! ಅದಕ್ಕಾಗಿ ಕೊಟ್ಟಷ್ಟು ತಕ್ಕೊಂಡು, ಹಾಕಿದ್ದನ್ನು ಉಂಡು, ಹೇಳಿದಷ್ಟು ಕೇಳಿಕೊಂಡು ಕಾಲಕಳೆಯುವ ಕೀಳ ಬೇಸಿಲನ ಕೈಯಲ್ಲಿ ಸಿಕ್ಕು ಬೀಳಬೇಕಾಗಲಿಲ್ಲವೆ? ನೋಡಿರಿ, ಕೀಳ ಕೆಲಸವು ಇಷ್ಟು ಅಸಹ್ಯವಾಗಿರುವದು! ಬೇಸಿಲನು ಸ್ವಭಾವತಃ ನೀಚನೂ, ದುಷ್ಟನೂ, ಕ್ರೂರನೂ, ನಿಷ್ಠುರನೂ ಆಗಿದ್ದನೆಂದು ಬೇರೆ ಹೇಳಬೇಕಾಗಿಲ್ಲ.

ಸರ್ಪಃ ಕ್ರೂರಃ ಖಲಃ ಕ್ರೂರಃ ಸರ್ಪಾತ್ ಕ್ರೂರತರಃ ಖಲಃ।
ಮಂತ್ರೌಷಧಿವಶಃ ಸರ್ಪಃ ಖಲಃ ಕೇನ ನಿವಾರ್ಯತೆ ॥೧॥

**ಅರ್ಥ:**— ಸರ್ಪವು ಸ್ವಭಾವತಃ ಕ್ರೂರವಿರುವದೇನೋ ನಿಜ. ಆದರೆ, ದುಷ್ಟ ಮನುಷ್ಯನು ಹಾವಿಗಿಂತಲೂ ಹೆಚ್ಚು ಕ್ರೂರನು. ಏಕೆಂದರೆ ಮಂತ್ರಗಳಿಂದಾಗಲಿ, ಔಷಧಗಳಿಂದಾಗಲಿ, ಹಾವಿನ ವಿಷದ ಬಾಧೆಯನ್ನು ಕಳೆದುಕೊಳ್ಳುವದು. ಶಕ್ಯವಿದೆ; ಆದರೆ ದುಷ್ಟನ ನಿವಾರಣೆ ಏತರಿಂದ ಆದೀತು. ಅರ್ಥಾತ್ ದುಷ್ಟನು ಯಾತರಿಂದಲೂ, ಯಾರಿಗೂ ವಶನಾಗಲಾರನು.

ವಿಷಧರತೋऽಪ್ಯತಿ ವಿಷಮಃ ಖಲ ಇತಿ ನ ಮೃಷಾವದಂತಿ
ವಿದ್ವಾಂಸಃ ॥
ಯದಯಂ ನಕುಲದ್ವೇಷೀ ಸಕುಲದ್ವೇಷೀ ಪುನಃ
ಪಿಶುನಃ ॥೧॥

**ಅರ್ಥ:**— ದುಷ್ಟನು ಹಾವಿಗಿಂತಲೂ ಹೆಚ್ಚು ಕೆಟ್ಟ ಎಂದು ವಿದ್ವಾಂಸರು ಹೇಳುವ ಮಾತು ಸುಳ್ಳಲ್ಲ. ಏಕೆಂದರೆ ಹಾವು ನಕುಲವನ್ನು ಅಂದರೆ ಮುಂಗುಲಿಯನ್ನಷ್ಟೇ ದ್ವೇಷಿಸುತ್ತದೆ. ಆದರೆ ದುಷ್ಟನು ಕುಲವಂತನನ್ನೂ, ಅಕುಲವಂತನನ್ನೂ, ಸಜ್ಜನರನ್ನೂ, ದುರ್ಜನರನ್ನೂ ಸಾರಾಂಶ ಎಲ್ಲರನ್ನೂ ದ್ವೇಷಿಸುತ್ತಾನೆ.

ಬೇಸಿಲನು ಈ ವರ್ಗದವನು. ಇಂತಹ ಕೀಳನ ಕೈಯಲ್ಲಿ ಏಕೆ ಸಿಕ್ಕು ಬೀಳಬೇಕಾಯಿತು? ಅವಿವೇಕತನದಿಂದ ಮಾಡಿದ ಕೀಳ ಕೆಲಸವನ್ನು ಮುಚ್ಚಿಕೊಳ್ಳುವದಕ್ಕಾಗಿ! ಆದುದರಿಂದ ವಿಚಾರವಿಲ್ಲದೆ ಯಾವ ಕೆಲಸವನ್ನಾದರೂ ಎಂದೂ ಮಾಡಬಾರದು. ಒಬ್ಬ ಕವಿಯು

" ಸಹಸಾ ವಿದಧೀತ ನ ಕ್ರಿಯಾಮವಿವೇಕಃ ಪರಮಾಪದಾಂ
ಪದಂ ॥ "

" ಅವಿವೇಕತನದಿಂದ ವಿಚಾರವಿಲ್ಲದೆ ಯಾವ ಕೆಲಸವನ್ನೂ ಯಾವಾಗಾದರೂ ಮಾಡಕೂಡದು: ಏಕೆಂದರೆ ಅಂತಹ ಕೆಲಸವು ಅನೇಕಾನೇಕ ವಿಪತ್ತುಗಳಿಗೆ ಕಾರಣವಾಗುವದು " ಎಂದು ಹೇಳಿದ್ದನ್ನು ನೆನಪಿಸಲ್ಲಿಡಬೇಕು. ಥಿಯೋಡರಳು ಇಂತಹ ಅವಿವೇಕ ಕೃತ್ಯವನ್ನು ಮಾಡಿದ್ದಳಾದುದರಿಂದಲೇ ನಿಜವಾದ ಆಪತ್ಯಪ್ರೇಮಕ್ಕೂ ಎರವಾಗಬೇಕಾಯಿತು !

ಆದರೆ ಈಗಿನ ಕಾಲದ ಮಾತೃಭಕ್ತಿಯು ವಿಲಕ್ಷಣವಾಗಿದೆ. ಪಶುಪಕ್ಷಿಗಳು ತುಸು ದೊಡ್ಡವಾಗಿ ತಮ್ಮ ಆಹಾರವನ್ನು ದೊರಕಿಸುವ ಶಕ್ತಿಬಂದಕೂಡಲೆ ತಾಯಿತಂದೆಗಳ ಹಂಬಲವನ್ನು ಬಿಟ್ಟುಕೊಡುತ್ತವೆ. ಇದೇ ವೃತ್ತಿಯನ್ನು ನಮ್ಮ ತರುಣರೂ ಅನುಕರಿಸಲಾರಂಭಿಸಿದ್ದಾರೆ. ತಾಯಿಯ ಪ್ರೀತಿಯಿಂದಲೇ ಬೆಳೆದು ದೊಡ್ಡವರಾಗಿದ್ದರೂ, ತಂದೆಯ ಸಹಾಯದಿಂದಲೇ ತುಸು ಮುಂದೆ ಬಂದು ವಿದ್ಯಾಬುದ್ಧಿಗಳಿತರೂ ಗಳಿಸಾಳಿಯಾದ ಕೂಡಲೆ ತಾಯಿತಂದೆಗಳು ಬೇಡಾಗುತ್ತಾರೆ. ಇಷ್ಟಕ್ಕೆ ಆ ಮುದುಕರ ಕರ್ಮಕಥೆ ಮುಗಿಯಲಿಲ್ಲ; ಅವರನ್ನು ಮನಬಂದಂತೆ ಹೀಯಾಳಿಸುತ್ತಾರೆ; ಅವಮಾನಿಸುತ್ತಾರೆ; ಕಡೆಗೆ ಇವರು ನನ್ನ ಹೊಟ್ಟೆಯ ಮಕ್ಕಳು ಎಂದು ಅನ್ನುವದು ಸಹ ಮಹಾಪಾತಕವೆನಿಸುತ್ತಿದೆ. ಆದರೆ ಮಾಡುವದೇನು ? ಈ ವೃತ್ತಿಯು, ಅವರ ಈ ನಡವಳಿಕೆಯು, ಈಗಿನ ಮನ್ವಂತರದಲ್ಲಿ ಒಂದು ಬಗೆಯ ಸಾಧಾರಣೆಯೇ ಆಗಿಹೋಗಿದೆ ! ಬೇರೆ ಹೇಳುವದೇನು !! ಆದರೆ ತುಸು ಹೆಚ್ಚು ವಿಚಾರ ಮಾಡಿ ನೋಡಿದರೆ ತಾಯಿಯ ಉಪಕಾರವು ಎಂದೂ ಮರೆಯುವಂತಹದು ಅಲ್ಲೆಂದು ಕಂಡು ಬರುವದು. ಈ ಬಗೆಯ ವಿಚಾರವು ನಮ್ಮ ತರುಣರಲ್ಲಿ ಹುಟ್ಟಲಿ !

ಈ ಜಗತ್ತು ಸ್ವಾರ್ಥಮಯವಾಗಿರುವದೆಂಬದೇನೊ ನಿಜ ಆದರೆ ಆ ಸ್ವಾರ್ಥಕ್ಕೂ ಮರ್ಯಾದೆ ಇರಬೇಕಲ್ಲವೆ ? " ಅತಿ ಸರ್ವತ್ರ ವರ್ಜಯೇತ್ " ಪರರ ಸರ್ವಸ್ವವು ನಾಶವಾದರೂ ಆಗಲಿ, ಅವರು ಬೇಕಾದ ಸಂಕಟಕ್ಕೆ ಒಳಗಾದರೂ ಒಳಗಾಗಲಿ, ತನ್ನ ಸ್ವಾರ್ಥಕ್ಕೆ ಮಾತ್ರ

ಯಾವ ಎಡರು ತೊಡರು ಬರಕೂಡದೆಂದು ಬಯಸುವವರು ಬೇಸಿಲಸು ಅತಿ ಸ್ವಾರ್ಥಕ್ಕೊಳಗಾಗಿ ಆತ್ಮನಾಶವನ್ನು ಮಾಡಿಕೊಂಡ ಸಂಗತಿಯನ್ನು ಚನ್ನಾಗಿ ನೆನಪಿಸಲ್ಲಿಡಬೇಕು. ಬಾದಶಾಹಿಸಿಯ ಔದಾರ್ಯದಿಂದ ಮುಂದೆ ಬಂದು ಉಚ್ಚ ಅಧಿಕಾರವನ್ನು ಪಡೆದು, ಅನೇಕಾನೇಕ ಕ್ರೂರಕೃತ್ಯಗಳನ್ನು ಮಾಡಿದರೂ ಬೈಲಿಗೆ ಬಾರದೆ ದೊಡ್ಡವನೆನಿಸಿಕೊಂಡ ಬೇಸಿಲಸು ಬಾದಶಾಹಿಸಿಯ ಮೇಲೆ ತಿರುಗಿಬಿದ್ದು ತನ್ನ ಲಾಭವನ್ನು ಇನ್ನಷ್ಟು ಮಾಡಿಕೊಳ್ಳಬೇಕೆಂಬ ಅತ್ಯಾಶೆಗೆ ಒಳಗಾಗಿ ಕಡೆಗೆ ಪ್ರಾಣವನ್ನೇ ಕಳೆದುಕೊಂಡನು. ಆದುದರಿಂದ ಅತಿಸ್ವಾರ್ಥವು ಹಾನಿಕರವಾದದ್ದೆಂಬದನ್ನು ಬೇಸೀಲನ ನಡತೆಯಿಂದ ವಾಚಕರು ಕಲಿತುಕೊಳ್ಳಬೇಕು.

ಗುಹ್ಯಗೋಷ್ಟಿಯ (ಮಾತು) ಗೋಜಿಗೇ ಹೋಗದಿರುವದು ಬಹು ಒಳ್ಳೇದು. ಇನ್ನು ಅನಿರ್ವಾಹ ಪ್ರಸಂಗದಲ್ಲಿ ಗುಪ್ತಸಂಗತಿಯನ್ನು ಹೇಳುವ ಇಲ್ಲವೆ ಕೇಳುವ ಅವಶ್ಯಕತೆಯುಂಟಾದರೆ ಆ ಸಂಗತಿಯನ್ನು ದೇಹದಲ್ಲಿ ಪ್ರಾಣವಿರುವ ಮಟ್ಟಿಗೆ ಗುಪ್ತವಾಗಿಯೇ ಇಡಬೇಕು. ಅರ ಪಾವು ಅನ್ನವು ಅರಗುವ ತನಕ ಹೊಟ್ಟೆಯಲ್ಲಿ ಉಳಿಯುತ್ತದೆ. ಆದರೆ ಜನರು ಅಕಸ್ಮಿಕವಾಗಿ ಹೇಳಿದ ಸಂಗತಿಯು ಕೆಲವರ ಹೊಟ್ಟೆಯಲ್ಲಿ ಅರಗಳಿಗೆ ಕೂಡ ನಿಲ್ಲುವದಿಲ್ಲ. ಅದನ್ನು ಯಾವಾಗ ಹೊರಗೆಡವಬೇಕೆಂಬದನ್ನು ಕಾಯ್ದುಕೊಂಡೇ ಕೂತಿರುತ್ತಾರೆ. ಆದರೆ ಮಠಾಧಿಪನಾದ ಲ್ಯೂಕನು ೧೦–೧೨ ವರುಷಗಳ ಪೂರ್ವದಲ್ಲಿ ಕೇಳಿದ ಥಿಯೋಡೋರಾಳ ಗುಪ್ತಸಂಗತಿಯನ್ನು ಕಡೆತನಕ ಗುಪ್ತವಾಗಿಯೇ ಇಡಲು ಒಡಂಬಟ್ಟನಲ್ಲವೆ? ಆತನು ಆ ಹುಡುಗನ ಕಲ್ಯಾಣಕ್ಕಾಗಿಯೇ ಅದನ್ನು ಹೊರಗೆಡವಲು ಬಯಸಿದನು. ಮುಖ್ಯ ಪಾರುಪತ್ಯಗಾರನು ಒತ್ತಾಯ ಮಾಡಿದ್ದರಿಂದಲೂ ಆತನ ಮುಂದೆ ಅದನ್ನು ಹೇಳದಿದ್ದರೆ ಇಷ್ಟು ಶ್ರಮಬಟ್ಟು ಅಲ್ಲೀತನಕ ಬಂದದ್ದು ತೀರ ನಿರರ್ಥಕವಾಗುವದೆಂದೂ ಮನಗಂಡ ಮೇಲೆ ಮಾತ್ರ ಅನಿರ್ವಾಹ ಪಕ್ಷಕ್ಕೆ ಆ ಗುಪ್ತಸಂಗತಿಯನ್ನು ಹೊರಗೆಡವಬೇಕಾಯಿತು. ಆದರೆ ಆ ದುಷ್ಟ ಪಾರುಪತ್ಯಗಾರನು ಅದನ್ನು ಸ್ವಾರ್ಥಕ್ಕಾಗಿ ಉಪಯೋಗಿಸಿಕೊಳ್ಳಬೇಕೆಂದು ಬಯಸಿ ಪ್ರಾಣಕಳೆದುಕೊಂಡನು.

ಸಾರಾಂಶ ಗುಹ್ಯಸ್ಫೋಟದಿಂದ ನಾಶವೂ ಗುಹ್ಯಗೋಪನದಿಂದ ಕಾರ್ಯ ಸಿದ್ಧಿಯೂ ಆಗುವದೆಂದು ನಿಃಸಂದೇಹವಾಗಿ ಹೇಳಬಹುದು.

ಕಟುಕನ ಮನೆಯಲ್ಲಿದ್ದ ಗಿಳಿಯು "ಕಡಿ, ಹೊಡಿ, ಬಡಿ, ಕೊಯ್ಯು, ಕೆತ್ತು" ಎಂಬ ಕರ್ಣಕಠೋರವಾದ ಕಠಿಣೋಕ್ತಿಗಳನ್ನು ಆಡುತ್ತಿದೆಂಬದೂ, ಋಷ್ಯಾಶ್ರಮದಲ್ಲಿದ್ದ ಗಿಳಿಯು "ಬನ್ನಿರಿ, ಕೂತು ಕೊಳ್ಳಿರಿ, ವಿಶ್ರಮಿಸಿರಿ, ಏನು ಬಂದಿರಿ? ಕಾರ್ಯವೇನು?" ಎಂಬ ಮೃದುಮಧುರವಾದ ಮಾತುಗಳನ್ನಾಡುತ್ತಿದೆಂಬದೂ ಎಲ್ಲರಿಗೂ ಗೊತ್ತಿದ್ದ ಸಂಗತಿಯೇ ಸರಿ. ಇದು ಸಹವಾಸದ ಫಲವು. ಸತ್ಸಹವಾಸವು ಸದಾ ಸಿಕ್ಕುವ ಸಾಹಸವನ್ನು ಮಾಡಬೇಕು. "ಸಜ್ಜನರ ಸಂಗ ಹೆಜ್ಜೇನು ಸವಿದಂತೆ,ದುರ್ಜನರ ಸಂಗವು ಕೆಸರೊಳು ಕಾಲು ಬಿದ್ದಂತೆ" ಬಾಲಕನಾದ ಲಿಯೋನ್ ಹುಟ್ಟಿದಾರಭ್ಯ ಸಜ್ಜನರಾದ, ಸಾಧುಗಳಾದ, ಸಂಯಮಿಗಳಾದ ಮುನಿಗಳ ಸಹವಾಸದಲ್ಲಿಯೇ ಇದ್ದುದರಿಂದ ಸಂತುಷ್ಟನೂ, ಸತ್ಯಭಾಷಿಯೂ, ಮಾತೃಪ್ರೇಮಿಯೂ ಆಗಿದ್ದನು.

ಕೈಕೊಂಡ ಕೆಲಸವನ್ನು ಕಾಲಕಾಲಕ್ಕೆ ಕ್ರಮಕ್ಕನುಸರಿಸಿ ಕೊನೆಗಾಣಿಸುವವನೇ ಕಾರ್ಯದಕ್ಷನೆಂತಲೂ, ಕಾರ್ಯಧುರಂಧರನೆಂತಲೂ ಕರೆಯಲ್ಪಡುತ್ತಾನೆ. ಬಾದಶಹನಾದ ಜಸ್ಟಿನನು ಇಡೀ ತುರ್ಕಸ್ಥಾನದ ರಾಜ್ಯಕಾರಭಾರವನ್ನು ಕೈಕೊಂಡಿದ್ದೇನೊ ನಿಜ. ಆದರೆ ಆತನು ವ್ಯಸನಾಧೀನನಾಗಿ ಯಾವತ್ತು ಕಾರ್ಯಭಾರವನ್ನು ಥಿಯೋಡೋರಾಳ ಕೈಯಲ್ಲಿ ಕೊಟ್ಟು ವ್ಯಸನಪಂಕದಲ್ಲಿ ನಿಮಗ್ನನಾದನು. ರಾಜ್ಯದಲ್ಲಿ ಅನ್ಯಾಯವಾಗುತ್ತಿದೆಯೋ, ನ್ಯಾಯವು ಸಿಕ್ಕುತ್ತಿದೆಯೋ ಇಲ್ಲವೊ ಇದರ ಅರಿವೇ ಆತನಿಗೆ ಉಳಿಯಲಿಲ್ಲ. ಸುಂದರವಾದ, ರಮಣೀಯವಾದ, ಸೌಖ್ಯಮಯವಾದ ಅರಮನೆಯ ಬುಡದಲ್ಲಿದ್ದ ಅಸಹ್ಯವಾದ, ಅಗಾಧ ಆಳುಳ್ಳ ಬಾವಿಯಲ್ಲಿ ಎಷ್ಟು ಅನಾಥರು ಕೊಂದು ಹಾಕಲ್ಪಟ್ಟಿದ್ದರೊ, ಎಷ್ಟು ಜನರ ಕಣ್ಣುಗಳು ಕಿತ್ತಲ್ಪಟ್ಟಿದ್ದವೊ, ಎಷ್ಟು ಜನರು ತಮ್ಮ ಮನಃಸಂವೇದನಗಳನ್ನು-ತಮ್ಮ ಮನಸ್ಸಿನೊಳಗೆ ಬರುವ ವಿಚಾರಗಳನ್ನು-ವ್ಯಕ್ತಪಡಿಸುವಂತಹ ನಾಲಿಗೆಯನ್ನೇ ಕಳೆದುಕೊಂಡಿದ್ದರೊ, ಇನ್ನೂ ಯಾವ ಬಗೆಯ, ಎಷ್ಟು ತರದ

ಕ್ರೂರಕೃತ್ಯಗಳು ನಡೆದಿದ್ದವೊ ಎಂಬದರ ಜ್ಞಾನವೇ ಅವನಿಗೆ ಇರಲಿಲ್ಲ. ಬಾದಶಾಹನಿಯು ಹೇಳಿದ್ದೇ ಬ್ರಹ್ಮವಾಕ್ಯವು, ಬೇಸಿಲನೇ ಆತನ ಕಾರಭಾರಿಯು; ಅಂದಮೇಲೆ ಕೇಳುವದೇನಿದೆ! ಇಂತಹ ಕೈಲಾಗದ ಅರಸನು ಇದ್ದರೂ ಅಷ್ಟೇ; ಇಲ್ಲದಿದ್ದರೂ ಅಷ್ಟೆ ಎಂದು ಜನರ ತಿಳುವಳಿಕೆಯಾದರೆ ಅದರಲ್ಲಿ ತಪ್ಪೇನಿದೆ? ಮನೆಯ ಹಿರಿಯನಾಗುವದು, ಮತ್ತು ರಾಜ್ಯದ ಹಿರಿಯನು ಅಂದರೆ ಅರಸನಾಗುವದು ಜನರಿಗೆ ಸುಖಮಯವಾಗಿಯೂ, ಮಾನಾರ್ಹವಾಗಿಯೂ ತೋರಿದರೂ ಹಿರಿಯತನವನ್ನು ಅಥವಾ ಅರಸೊತ್ತಿಗೆಯನ್ನು ಸರಿಯಾಗಿ ನಡಿಸಬೇಕೆಂಬ ಹಂಬಲವುಳ್ಳ ಹಿರಿಯನಿಗೆ ಅಥವಾ ಅರಸನಿಗೆ ಅದು ನಿಜವಾಗಿ ಸುಖದಾಯಕವಾಗಿರುವದಿಲ್ಲ. ಏಕಂದರೆ ಹಿರಿಯನು ಮನೆಯೊಳಗಿರುವ ಯಾವತ್ತು, ಜನರ ಕಷ್ಟನಷ್ಟಗಳನ್ನು ಸಹಿಸಿಕೊಂಡು ಅವರು ಸುಖಿಯಾಗುವಂತೆ ಮಾಡಬೇಕಾಗುತ್ತದೆ. ಹೀಗೆ ಮಾಡದೆ ತನಗೆ ಸುಖವಾದರೆ ಸಾಕು, ಉಳಿದವರು ಬಾಳಲಿ, ಸಾಯಲಿ, ಎಂಬ ಗ್ರಹಿಕೆಯುಳ್ಳ ಹಿರಿಯನವು ಹಿರಿಯತನವು ಬಹುದಿವಸ ಬಾಳಲಾರದು. ಇದೇ ಮೇರೆಗೆ ಪ್ರಜೆಗಳ ಸುಖದುಃಖವೇ ತನ್ನ ಸುಖದುಃಖವೆಂದು ತಿಳಿದುಕೊಂಡು ಕಾರ್ಯಭಾರವನ್ನು ಮಾಡುವವನೇ ನಿಜವಾದ ಅರಸು. ಹಾಗಿರದೆ ಅವನು ಕರ್ತವ್ಯಹೀನನಾದರೆ, ತನ್ನ ಸುಖಸಲ್ಲಾಪಗಳಲ್ಲಿ ನಿಮಗ್ನನಾದರೆ ಅವನು ಅರಸನಲ್ಲ ನಿರಸಪುರುಷನೆಂದು ನಿಃಸಂಶಯವಾಗಿ ಹೇಳಬಹುದು;

ಸಾರಾಂಶ ಮಾತೃಪ್ರೇಮ, ಪುತ್ರವಾತ್ಸಲ್ಯಗಳನ್ನೂ ಅವಿವೇಕತನದಿಂದ ಯಾವ ಕೆಲಸವನ್ನೂ ಮಾಡಬಾರದೆಂಬದನ್ನೂ ಥಿಯೊಡೋರಾಳಿಂದಲೂ ಅತಿ ಸ್ವಾರ್ಥವು ನಾಶಕ್ಕೆ ಕಾರಣವೆಂಬದನ್ನು ಬೇಸಿಲನ ನಡತೆಯಿಂದಲೂ, ಗುಹ್ಯಗೋಪನದಿಂದ ಕಾರ್ಯಸಿದ್ಧಿಯಾಗುವದೆಂಬದನ್ನು ಮಠಾಧಿಪನಾದ ಲ್ಯೂಕನಿಂದಲೂ, ಸತ್ಸಹವಾಸದಿಂದ ಸದ್ಗುಣ ಸದ್ಭಾವಗಳು ಹುಟ್ಟುತ್ತವೆಂಬದನ್ನು ಬಾಲಕನಾದ ಲಿಯೋನನಿಂದಲೂ, ವ್ಯಸನಾಸಕ್ತನಾಗುವದರಿಂದ ಮನುಷ್ಯನು ದ್ವಿಪಾದ ಪಶುವಾಗುತ್ತಾನೆಂಬದನ್ನು ಬಾದಶಹನಾದ ಜಸ್ಟಿನನಿಂದಲೂ ಕಲಿತುಕೊಳ್ಳಬೇಕೆಂದು ವಾಚಕರಿಗೆ ಆಗ್ರಹಪೂರ್ವಕವಾಗಿ ಹೇಳುತ್ತೇವೆ.

## ಇದೇ ಗ್ರಂಥಕರ್ತರು ಬರೆದ ಬೇರೆ ಪುಸ್ತಕಗಳು

### — ಅಚ್ಚಾದ ಪುಸ್ತಕಗಳು —

ರಾಸೆಲಾಸ ಎಂಬ ಸರಸವಾದ ಕಾದಂಬರಿ ೨ಸೇಯ ಮ
ಬೆಲೆ ೧ ರೂ. ಇದ್ದದ್ದು ೧೦ ಆ
ಪ್ರತಿಗಳು ಗ್ರಂಥಕರ್ತರಲ್ಲಿ

೨ 'ವಿಶ್ವ' ಎಂಬ ಪ್ರಬಂಧ ಪ್ರತಿಗಳು ತೀ

೩ ಹಾಸ್ಯ ,, ,, ,,

೪ ಸಂಸಾರ ಕರ್ತವ್ಯ ,,

೫ ಹೆಣ್ಣುಮಕ್ಕಳ ಆರೋಗ್ಯವಿಜ್ಞಾನ (ವ್ಯಾಕವಿಲನ ಕಂಪ
೨೦೦ ರು. ಬಹುಮಾನ ಕೆ
ಗಳು ಬರಿಸಿದ್ದು ಆ ಕಂಪನಿಯಲ್ಲಿ ಸಿ

೬ ಒಡೆಯರ ಪಾಠ

೭ ರಾಮರಕ್ಷಾಸ್ತೋತ್ರ ಬೆಲೆ ೧ ಆ. ಗ್ರಂಥಕರ್ತರಲ್ಲಿ

**ಪ್ರಕಟನೆ:—** ರಾಸೆಲಾಸ ೯ ೧೦, ರಾಮರಕ್ಷಾ ೯
ಪ್ರೇಮ ೯ ೪ ಮೂರೂ ತಕ್ಕೊಂಡರೆ ಒರೆ ೯ ೧೨ ಬೆಲೆ;
೩ನೆಯ ಗಳನ್ನಷ್ಟೆ ತೆಗೆದುಕೊಂಡರೆ ೯ ೪ ಬೆಲೆ ಜೇಳಿಸ

## ಅಚ್ಚಾಗುವ ಪುಸ್ತಕಗಳು.

೧ ಹ್ಯಾಮ್ಲೆಟ್ ನಾಟಕ

೨ ದಾದಾಭಾಯಿ ನವರೋಜಿಯವರ ಚರಿತ್ರೆ

೩ ಮಂಜುಳಾ ಎಂಬ ಕಾದಂಬರಿ ( Mrs. Henry

೪ ಮಹಾಯುದ್ಧದ ಸಂಕ್ಷಿಪ್ತ ಇತಿಹಾಸ

ಅಚ್ಚಾದ ೧ ರಿಂದ ೪ ಪುಸ್ತಕಗಳಿಗೂ, ಅಚ್ಚಾಗದೆ ಪುಸ್ತಕಗಳಿಗೂ ಕರ್ನಾಟಕ ವಿದ್ಯಾವರ್ಧಕ ಸಂಘದಿಂದ ದೊರೆತಿದೆ.